**ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ: ಕೇಂದ್ರ ಕಛೇರಿ**
**ಸಾರಿಗೆ ಸದನ : ಗುಲಬರ್ಗಾ.**

ಸಂಖ್ಯೆ: ಈಕರಸಾ/ಕೇಕ/ನೇಮಕ/ನೇ-32/ 1503 /2014-15 ದಿನಾಂಕ: 03-09-2014

# ಜಾಹೀರಾತು ಸಂಖ್ಯೆ : 3 / 2014

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಖಾಲಿ ಇರುವ ದರ್ಜೆ-3 ಮೇಲ್ವಿಚಾರಕೇತರ ಹುದ್ದೆಗಳಾದ ಕಿರಿಯ ಸಹಾಯಕ ಕಮ್ ಡಾಟಾ ಎಂಟ್ರಿ ಆಪರೇಟರ್-101 ಹುದ್ದೆಗಳು, ಅಂಕಿ ಅಂಶ ಸಹಾಯಕ-12 ಹುದ್ದೆಗಳು, ಸಹಾಯಕ ಲೆಕ್ಕಿಗ-25 ಹುದ್ದೆಗಳು, ಸಹಾಯಕ ಉಗ್ರಾಣ ರಕ್ಷಕ-20 ಹುದ್ದೆಗಳು, ಸಹಾಯಕ ಸಂಚಾರ ನಿರೀಕ್ಷಕ-37+4 ಹಿಂಬಾಕಿ ಹುದ್ದೆಗಳು, ಭದ್ರತಾ ರಕ್ಷಕ-259 ಹುದ್ದೆಗಳು, ತಾಂತ್ರಿಕ ಸಹಾಯಕ-360 ಹುದ್ದೆಗಳು, ಕುಶಲಕರ್ಮಿ-140 + 1 **ಆಟೋ ಎಲೆಕ್ಟ್ರೀಷಿಯನ್** ಹಿಂಬಾಕಿ ಹುದ್ದೆಗಳನ್ನು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರ ಪದವೃಂದ ಮತ್ತು ನೇಮಕಾತಿ ನಿಯಮಾವಳಿ 1982 ಮತ್ತು ತದನಂತರದ ತಿದ್ದುಪಡಿ ಆದೇಶಗಳ ಅನುಸಾರ ಹಾಗೂ 371 (ಜೆ) ರನ್ವಯ ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ (ಕರ್ನಾಟಕ ಸಾರ್ವಜನಿಕ ಉದ್ಯೋಗ ತಿದ್ದುಪಡಿ ಆದೇಶ 2013) ಅನುಸಾರ ನೇರ ನೇಮಕಾತಿಯ ಮೂಲಕ ತುಂಬಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ **(ONLINE)** ಮುಖಾಂತರ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿದ್ದು ನೇಮಕಾತಿ ಸಮಯದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಮಾರ್ಪಡಿಸಬಹುದಾಗಿರುತ್ತದೆ.

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಗುಲಬರ್ಗಾ ವಿಭಾಗ-1, ಗುಲಬರ್ಗಾ ವಿಭಾಗ-2, ಬೀದರ ವಿಭಾಗ, ರಾಯಚೂರು ವಿಭಾಗ, ಯಾದಗಿರ ವಿಭಾಗ, ಬಳ್ಳಾರಿ ವಿಭಾಗ, ಕೊಪ್ಪಳ ವಿಭಾಗ ಮತ್ತು ಹೊಸಪೇಟೆ ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ಸಿದ್ಧರಿದ್ದಲ್ಲಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

**ಭಾರತ ಸಂವಿಧಾನದ ಅನುಚ್ಛೇಧ 371(ಜೆ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಡಿಪಿಎಆರ್ 06 ಪಿಎಲ್ಎಕ್ಸ್ 2012 ಬೆಂಗಳೂರು ದಿನಾಂಕ:20-01-2014 ರಂತೆ ಹೈದ್ರಾಬಾದ ಕರ್ನಾಟಕ ಪ್ರದೇಶದ ಸ್ಥಳೀಯ (LOCAL CADRE) ವ್ಯಕ್ತಿಗಳಿಗೆ ಶೇಕಡ 80 ರಷ್ಟು ಮೀಸಲಾತಿಯನ್ನು ಹಾಗೂ ಹೈದ್ರಾಬಾದ ಕರ್ನಾಟಕ ಪ್ರದೇಶ ಹೊರತುಪಡಿಸಿದ ಸ್ಥಳೀಯೇತರ (RESIDUAL CADRE) ವ್ಯಕ್ತಿಗಳಿಗೆ ಶೇಕಡ 20 ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ.** ಅದರಂತೆ ಪ್ರಸ್ತುತ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಈ ಕೆಳಕಾಣಿಸಿದ ವೃಂದಗಳಲ್ಲಿ ಸ್ಥಳೀಯ ಶೇಕಡ 80 ಮತ್ತು ಸ್ಥಳಿಯೇತರ ಶೇಕಡ 20ರ ಅನುಪಾತದಲ್ಲಿ ಸರಿದೂಗಿಸಿದ ನಂತರ ಹುದ್ದೆಗಳ ಮೀಸಲಾತಿಯ ವರ್ಗೀಕರಣ ಹೈದ್ರಾಬಾದ ಕರ್ನಾಟಕ ಪ್ರದೇಶದ ಸ್ಥಳೀಯ (LOCAL CADRE) ಮತ್ತು ಹೈದ್ರಾಬಾದ ಕರ್ನಾಟಕ ಪ್ರದೇಶ ಹೊರತುಪಡಿಸಿದ ಸ್ಥಳೀಯೇತರ (RESIDUAL CADRE) ರೋಸ್ಟರ್ ಬಿಂದುಗಳು ಪ್ರಸ್ತುತ ಸಂಸ್ಥೆಯಲ್ಲಿ ಈ ಕೆಳಕಾಣಿಸಿದಂತಿರುತ್ತವೆ.

**-: ಕಿರಿಯ ಸಹಾಯಕ ಕಮ್ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳು :-**

**"ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗಾಗಿ (Local Cadre) ಕಿರಿಯ ಸಹಾಯಕ ಕಮ್ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳ ಮೀಸಲಾತಿ ರೋಸ್ಟರ್ ಬಿಂದುಗಳ ವರ್ಗೀಕರಣ"**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ-1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 6 | 4 | 1 | 4 | 1 | 3 | 2 | 2 | 23 |
| ಮಹಿಳಾ | 6 | 2 | 1 | 2 | - | - | 2 | 8 | 21 |
| ಗ್ರಾಮೀಣ | 5 | - | - | 2 | - | - | - | 6 | 13 |
| **ಅಂಗವಿಕಲ ವ್ಯಕ್ತಿಗಳಿಗೆ:** ದೃಷ್ಟಿ ಮಾಂದ್ಯವುಳ್ಳವರಿಗೆ | 3 | - | - | 1 | - | - | - | 3 | 07 |
| ಒಟ್ಟು | 20 | 06 | 02 | 09 | 01 | 03 | 04 | 19 | 64 |

**–: ಕಿರಿಯ ಸಹಾಯಕ ಕಮ್ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳು :–**

**–: ಸ್ಥಳೀಯೇತರ (Residual Cadre) ಅಭ್ಯರ್ಥಿಗಳಿಗಾಗಿ ಕಿರಿಯ ಸಹಾಯಕ ಕಮ್ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳ ರೋಸ್ಟರ್ ಬಿಂದುಗಳ ವರ್ಗೀಕರಣ :–**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 4 | 5 | 4 | 4 | 3 | 1 | - | 4 | 25 |
| ಮಹಿಳಾ | 3 | - | - | - | - | - | - | 4 | 07 |
| ಗ್ರಾಮೀಣ | - | - | - | - | - | - | - | 3 | 03 |
| **ಅಂಗವಿಕಲ ವ್ಯಕ್ತಿಗಳಿಗೆ:** ದೃಷ್ಟಿ ಮಾಂದ್ಯವುಳ್ಳವರಿಗೆ | - | - | - | - | - | - | - | 02 | 02 |
| ಒಟ್ಟು | 07 | 05 | 04 | 04 | 03 | 01 | - | 13 | 37 |

**–: ಅಂಕಿ ಅಂಶ ಸಹಾಯಕ ಹುದ್ದೆಗಳು :–**

**"ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗಾಗಿ (Local Cadre) ಅಂಕಿ ಅಂಶ ಸಹಾಯಕ ಹುದ್ದೆಗಳ ಮೀಸಲಾತಿ ರೋಸ್ಟರ್ ಬಿಂದುಗಳ ವರ್ಗೀಕರಣ"**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 5 | 5 | - | - | - | - | - | 1 | 11 |

**–: ಅಂಕಿ ಅಂಶ ಸಹಾಯಕ ಹುದ್ದೆಗಳು :–**

**–: ಸ್ಥಳೀಯೇತರ (Residual Cadre) ಅಭ್ಯರ್ಥಿಗಳಿಗಾಗಿ ಅಂಕಿ ಅಂಶ ಸಹಾಯಕ ಹುದ್ದೆಗಳ ರೋಸ್ಟರ್ ಬಿಂದುಗಳ ವರ್ಗೀಕರಣ :–**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | - | - | - | - | - | - | - | 01 |
| ಒಟ್ಟು | 01 | - | - | - | - | - | - | - | 01 |

**–: ಸಹಾಯಕ ಲೆಕ್ಕಿಗ ಹುದ್ದೆಗಳು :–**

**"ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗಾಗಿ (Local Cadre) ಸಹಾಯಕ ಲೆಕ್ಕಿಗ ಹುದ್ದೆಗಳ ಮೀಸಲಾತಿ ರೋಸ್ಟರ್ ಬಿಂದುಗಳ ವರ್ಗೀಕರಣ"**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 6 | 3 | 2 | 1 | - | - | - | 6 | 18 |
| ಮಹಿಳಾ | - | - | - | - | - | - | - | 4 | 04 |
| ಗ್ರಾಮೀಣ | - | - | - | - | - | - | - | 1 | 01 |
| ಒಟ್ಟು | 06 | 03 | 02 | 01 | - | - | - | 11 | 23 |

**–: ಸಹಾಯಕ ಲೆಕ್ಕಿಗ ಹುದ್ದೆಗಳು :–**

**–: ಸ್ಥಳೀಯೇತರ (Residual Cadre) ಅಭ್ಯರ್ಥಿಗಳಿಗಾಗಿ ಸಹಾಯಕ ಲೆಕ್ಕಿಗ ಹುದ್ದೆಗಳ ರೋಸ್ಟರ್ ಬಿಂದುಗಳ ವರ್ಗೀಕರಣ :–**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 2 | - | - | - | - | - | - | - | 02 |
| ಒಟ್ಟು | 02 | - | - | - | - | - | - | - | 02 |

**–: ಸಹಾಯಕ ಉಗ್ರಾಣ ರಕ್ಷಕ ಹುದ್ದೆಗಳು:–**

**"ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗಾಗಿ (Local Cadre) ಸಹಾಯಕ ಉಗ್ರಾಣ ರಕ್ಷಕ ಹುದ್ದೆಗಳ ಮೀಸಲಾತಿ ರೋಸ್ಟರ್ ಬಿಂದುಗಳ ವರ್ಗೀಕರಣ"**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 2 | 5 | 1 | 1 | - | - | - | 6 | 15 |
| ಮಹಿಳಾ | - | - | - | - | - | - | - | 2 | 02 |
| ಗ್ರಾಮೀಣ | - | - | - | - | - | - | - | 1 | 01 |
| ಒಟ್ಟು | 02 | 05 | 01 | 01 | - | - | - | 09 | 18 |

**–: ಸಹಾಯಕ ಉಗ್ರಾಣ ರಕ್ಷಕ ಹುದ್ದೆಗಳು:–**

**–: ಸ್ಥಳೀಯೇತರ (Residual Cadre) ಅಭ್ಯರ್ಥಿಗಳಿಗಾಗಿ ಸಹಾಯಕ ಉಗ್ರಾಣ ರಕ್ಷಕ ಹುದ್ದೆಗಳ ರೋಸ್ಟರ್ ಬಿಂದುಗಳ ವರ್ಗೀಕರಣ :–**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 2 | - | - | - | - | - | - | - | 02 |
| ಒಟ್ಟು | 02 | - | - | - | - | - | - | - | 02 |

**–: ಸಹಾಯಕ ಸಂಚಾರ ನಿರೀಕ್ಷಕ ಹುದ್ದೆಗಳು :–**

**"ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗಾಗಿ (Local Cadre) ಸಹಾಯಕ ಸಂಚಾರ ನಿರೀಕ್ಷಕ ಹುದ್ದೆಗಳ ಮೀಸಲಾತಿ ರೋಸ್ಟರ್ ಬಿಂದುಗಳ ವರ್ಗೀಕರಣ"**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 6 | 8 | 3 | 2 | 1 | - | - | 9 | 29 |
| ಮಹಿಳಾ | 1 | - | - | - | - | - | - | 5 | 06 |
| ಗ್ರಾಮೀಣ | - | - | - | - | - | - | - | 1 | 01 |
| ಒಟ್ಟು | 07 | 08 | 03 | 02 | 01 | - | - | 15 | 36 |

**"ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗಾಗಿ (Local Cadre) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಸಹಾಯಕ ಸಂಚಾರ ನಿರೀಕ್ಷಕ ಹಿಂಬಾಕಿ ಹುದ್ದೆಗಳ ವಿವರ**

| ವಗೀಕರಣ | ಪ.ಜಾತಿ | ಪ.ಪಂಗಡ |
|---|---|---|
| ಸಾಮಾನ್ಯ | – | 2 |
| ಮಹಿಳಾ | 2 | – |
| ಒಟ್ಟು | 02 | 02 |

**–: ಸಹಾಯಕ ಸಂಚಾರ ನಿರೀಕ್ಷಕ ಹುದ್ದೆಗಳು :–**

**–: ಸ್ಥಳೀಯೇತರ (Residual Cadre) ಅಭ್ಯರ್ಥಿಗಳಿಗಾಗಿ ಸಹಾಯಕ ಸಂಚಾರ ನಿರೀಕ್ಷಕ ಹುದ್ದೆಗಳ ರೋಸ್ಟರ್ ಬಿಂದುಗಳ ವರ್ಗೀಕರಣ :–**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | - | - | - | - | - | - | - | 01 |
| ಒಟ್ಟು | 01 | - | - | - | - | - | - | - | 01 |

**–: ಕುಶಲಕರ್ಮಿ (ಆಟೋ ಮೆಕ್ಯಾನಿಕ್) ಹುದ್ದೆಗಳು :–**

**"ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಗಾಗಿ (Local Cadre) ಕುಶಲಕರ್ಮಿ(ಆಟೋ ಮೆಕ್ಯಾನಿಕ್) ಹುದ್ದೆಗಳ ಮೀಸಲಾತಿ ರೋಸ್ಟರ್ ಬಿಂದುಗಳ ವರ್ಗೀಕರಣ"**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 7 | 7 | 7 | 6 | 3 | 2 | 2 | 9 | 43 |
| ಮಹಿಳಾ | 4 | - | - | 2 | - | - | - | 8 | 14 |
| ಗ್ರಾಮೀಣ | 1 | - | - | 1 | - | - | - | 8 | 10 |
| **ಅಂಗವಿಕಲ ವ್ಯಕ್ತಿಗಳಗೆ:** ದೃಷ್ಟಿ ಮಾಂದ್ಯವುಳ್ಳವರಿಗೆ | - | - | - | - | - | - | - | 2 | 02 |
| ಒಟ್ಟು | 12 | 07 | 07 | 09 | 03 | 02 | 02 | 27 | 69 |

**–: ಕುಶಲಕರ್ಮಿ (ಆಟೋ ಮೆಕ್ಯಾನಿಕ್) ಹುದ್ದೆಗಳು :–**

**–: ಸ್ಥಳೀಯೇತರ (Residual Cadre) ಅಭ್ಯರ್ಥಿಗಳಗಾಗಿ ಕುಶಲಕರ್ಮಿ (ಆಟೋ ಮೆಕ್ಯಾನಿಕ್) ಹುದ್ದೆಗಳ ರೋಸ್ಟರ್ ಬಿಂದುಗಳ ವರ್ಗೀಕರಣ :–**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 3 | 2 | 3 | - | - | - | - | 5 | 13 |
| ಮಹಿಳಾ | - | - | - | - | - | - | - | 1 | 01 |
| ಗ್ರಾಮೀಣ | - | - | - | - | - | - | - | 1 | 01 |
| ಒಟ್ಟು | 03 | 02 | 03 | - | - | - | - | 07 | 15 |

**–: ಕುಶಲಕರ್ಮಿ (ಆಟೋ ಬಾಡಿ ಬಿಲ್ಡರ್) ಹುದ್ದೆಗಳು :–**

**"ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಗಾಗಿ (Local Cadre) ಕುಶಲಕರ್ಮಿ(ಆಟೋ ಬಾಡಿ ಬಿಲ್ಡರ್) ಹುದ್ದೆಗಳ ಮೀಸಲಾತಿ ರೋಸ್ಟರ್ ಬಿಂದುಗಳ ವರ್ಗೀಕರಣ"**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 3 | 4 | 2 | - | - | - | - | 4 | 13 |
| ಮಹಿಳಾ | - | - | - | - | - | - | - | 2 | 02 |
| ಗ್ರಾಮೀಣ | - | - | - | - | - | - | - | 1 | 01 |
| ಒಟ್ಟು | 03 | 04 | 02 | - | - | - | - | 07 | 16 |

**–: ಕುಶಲಕರ್ಮಿ (ಆಟೋ ಬಾಡಿ ಬಿಲ್ಡರ್) ಹುದ್ದೆಗಳು :–**

**–: ಸ್ಥಳೀಯೇತರ (Residual Cadre) ಅಭ್ಯರ್ಥಿಗಳಗಾಗಿ ಕುಶಲಕರ್ಮಿ (ಆಟೋ ಬಾಡಿ ಬಿಲ್ಡರ್) ಹುದ್ದೆಗಳ ರೋಸ್ಟರ್ ಬಿಂದುಗಳ ವರ್ಗೀಕರಣ :–**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 3 | - | - | - | - | - | - | - | 03 |
| ಒಟ್ಟು | 03 | - | - | - | - | - | - | - | 03 |

**–: ಕುಶಲಕರ್ಮಿ (ಆಟೋ ವೆಲ್ಡರ್) :–**

**"ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಗಾಗಿ (Local Cadre) ಕುಶಲಕರ್ಮಿ(ಆಟೋ ವೆಲ್ಡರ್) ಹುದ್ದೆಗಳ ಮೀಸಲಾತಿ ರೋಸ್ಟರ್ ಬಿಂದುಗಳ ವರ್ಗೀಕರಣ"**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 6 | 1 | - | - | - | - | - | 1 | 08 |
| ಒಟ್ಟು | 06 | 01 | - | - | - | - | - | 01 | 08 |

**–: ಕುಶಲಕರ್ಮಿ (ಆಟೋ ಪೇಂಟರ್) :–**

**"ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಗಾಗಿ (Local Cadre) ಕುಶಲಕರ್ಮಿ(ಆಟೋ ಪೇಂಟರ್) ಹುದ್ದೆಗಳ ಮೀಸಲಾತಿ ರೋಸ್ಟರ್ ಬಿಂದುಗಳ ವರ್ಗೀಕರಣ"**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 5 | - | - | - | - | - | - | 3 | 08 |
| ಒಟ್ಟು | 05 | - | - | - | - | - | - | - | 08 |

**–: ಕುಶಲಕರ್ಮಿ (ಆಟೋ ಪೇಂಟರ್) :–**

**–: ಸ್ಥಳೀಯೇತರ (Residual Cadre) ಅಭ್ಯರ್ಥಿಗಳಗಾಗಿ ಕುಶಲಕರ್ಮಿ (ಆಟೋ ಪೇಂಟರ್) ಹುದ್ದೆಗಳ ರೋಸ್ಟರ್ ಬಿಂದುಗಳ ವರ್ಗೀಕರಣ :–**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | - | - | - | - | - | - | - | 01 |
| ಒಟ್ಟು | 01 | - | - | - | - | - | - | - | 01 |

**–: ಕುಶಲಕರ್ಮಿ (ಆಟೋ ಎಲೆಕ್ಟ್ರೀಷಿಯನ್) :–**

**"ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಗಾಗಿ (Local Cadre) ಕುಶಲಕರ್ಮಿ(ಆಟೋ ಎಲೆಕ್ಟ್ರೀಷಿಯನ್) ಹುದ್ದೆಗಳ ಮೀಸಲಾತಿ ರೋಸ್ಟರ್ ಬಿಂದುಗಳ ವರ್ಗೀಕರಣ"**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 4 | 3 | | 1 | - | - | - | 5 | 13 |
| ಮಹಿಳಾ | - | - | - | - | - | - | - | 1 | 1 |
| ಗ್ರಾಮೀಣ | - | - | - | - | - | - | - | 1 | 1 |
| **ಅಂಗವಿಕಲ ವ್ಯಕ್ತಿಗಳಗೆ:** ದೃಷ್ಟಿ ಮಾಂದ್ಯವುಳ್ಳವರಿಗೆ | - | - | - | - | - | - | - | 1 | 1 |
| ಒಟ್ಟು | 04 | 03 | - | 01 | - | - | - | 08 | 16 |

**"ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಗಾಗಿ (Local Cadre) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭ್ಯರ್ಥಿಗಳಗೆ ಕುಶಲಕರ್ಮಿ (ಆಟೋ ಎಲೆಕ್ಟ್ರೀಷಿಯನ್) ಹಿಂಬಾಕಿ ಹುದ್ದೆಗಳ ವಿವರ**

| ವರ್ಗೀಕರಣ | ಪ ಜಾ | ಪ ಪಂ |
|---|---|---|
| ಸಾಮಾನ್ಯ | 01 | – |
| ಒಟ್ಟು | 01 | – |

**–: ಕುಶಲಕರ್ಮಿ (ಆಟೋ ಎಲೆಕ್ಟ್ರೀಷಿಯನ್) :–**

**–: ಸ್ಥಳೀಯೇತರ (Residual Cadre) ಅಭ್ಯರ್ಥಿಗಳಗಾಗಿ ಕುಶಲಕರ್ಮಿ (ಆಟೋ ಎಲೆಕ್ಟ್ರೀಷಿಯನ್) ಹುದ್ದೆಗಳ ರೋಸ್ಟರ್ ಬಿಂದುಗಳ ವರ್ಗೀಕರಣ :–**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 3 | 1 | - | - | - | - | - | - | 04 |
| ಒಟ್ಟು | 03 | 01 | - | - | - | - | - | - | 04 |

**–: ಭದ್ರತಾ ರಕ್ಷಕ ಹುದ್ದೆಗಳು :–**

**"ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗಾಗಿ (Local Cadre) ಭದ್ರತಾ ರಕ್ಷಕ ಹುದ್ದೆಗಳ ಮೀಸಲಾತಿ ರೋಸ್ಟರ್ ಬಿಂದುಗಳ ವರ್ಗೀಕರಣ"**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 14 | 8 | 7 | 13 | 6 | 9 | 9 | 29 | 95 |
| ಮಹಿಳಾ | 10 | 2 | 5 | 11 | 2 | - | - | 26 | 56 |
| ಗ್ರಾಮೀಣ | 8 | - | - | 8 | - | - | - | 24 | 40 |
| ಮಾಜಿ ಸೈನಿಕ | - | - | - | - | - | - | - | 3 | 03 |
| ಕನ್ನಡ ಮಾಧ್ಯಮ | - | - | - | - | - | - | - | 1 | 01 |
| ಒಟ್ಟು | 32 | 10 | 12 | 32 | 08 | 09 | 09 | 83 | 195 |

**–: ಭದ್ರತಾ ರಕ್ಷಕ ಹುದ್ದೆಗಳು :–**

**–: ಸ್ಥಳೀಯೇತರ (Residual Cadre) ಅಭ್ಯರ್ಥಿಗಳಿಗಾಗಿ ಭದ್ರತಾ ರಕ್ಷಕ ಹುದ್ದೆಗಳ ರೋಸ್ಟರ್ ಬಿಂದುಗಳ ವರ್ಗೀಕರಣ**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 12 | 8 | 8 | 4 | 1 | - | - | 9 | 42 |
| ಮಹಿಳಾ | 3 | 1 | - | 1 | - | - | - | 10 | 15 |
| ಗ್ರಾಮೀಣ | - | - | - | - | - | - | - | 6 | 06 |
| ಮಾಜಿ ಸೈನಿಕ | - | - | - | - | - | - | - | 1 | 01 |
| ಒಟ್ಟು | 15 | 09 | 08 | 05 | 01 | - | - | 26 | 64 |

**–: ತಾಂತ್ರಿಕ ಸಹಾಯಕ ಹುದ್ದೆಗಳು :–**

**"ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗಾಗಿ (Local Cadre) ತಾಂತ್ರಿಕ ಸಹಾಯಕ ಹುದ್ದೆಗಳ ಮೀಸಲಾತಿ ರೋಸ್ಟರ್ ಬಿಂದುಗಳ ವರ್ಗೀಕರಣ"**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 10 | 4 | 3 | 14 | 6 | 5 | 7 | 28 | 77 |
| ಮಹಿಳಾ | 16 | 4 | 5 | 15 | 5 | 4 | 9 | 48 | 106 |
| ಗ್ರಾಮೀಣ | 14 | 2 | 4 | 14 | 3 | 2 | 4 | 42 | 85 |
| **ಅಂಗವಿಕಲ ವ್ಯಕ್ತಿಗಳಿಗೆ:**<br>ದೃಷ್ಟಿ ಮಾಂದ್ಯವುಳ್ಳವರಿಗೆ<br>ಶ್ರವಣ ದೋಷವುಳ್ಳವರಿಗೆ | <br>5<br>- | <br>1<br>- | <br>3<br>- | <br>5<br>- | <br>2<br>- | <br>2<br>- | <br>4<br>- | <br>10<br>02 | <br>32<br>02 |
| ಮಾಜಿ ಸೈನಿಕ | 2 | - | - | 2 | - | - | - | 13 | 17 |
| ಕನ್ನಡ ಮಾಧ್ಯಮ | 1 | - | - | 1 | - | - | - | 6 | 8 |
| ಯೋಜನಾ ನಿರಾಶ್ರಿತ | - | - | - | - | - | | - | 6 | 6 |
| ಒಟ್ಟು | 48 | 11 | 15 | 51 | 16 | 13 | 24 | 155 | 333 |

**–: ತಾಂತ್ರಿಕ ಸಹಾಯಕ ಹುದ್ದೆಗಳು :–**

**ಸ್ಥಳೀಯೇತರ (Residual Cadre)ಅಭ್ಯರ್ಥಿಗಳಿಗಾಗಿ ತಾಂತ್ರಿಕ ಸಹಾಯಕ ಹುದ್ದೆಗಳ ರೋಸ್ಟರ್ ಬಿಂದುಗಳ ವರ್ಗೀಕರಣ**

| ವರ್ಗೀಕರಣ | ಪ.ಜಾ | ಪ.ಪಂ | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 3 | 1 | 2 | 2 | 1 | 1 | 1 | 5 | 16 |
| ಮಹಿಳಾ | 1 | - | - | 1 | - | - | - | 4 | 06 |
| ಗ್ರಾಮೀಣ | 1 | - | - | - | - | - | - | 3 | 04 |
| **ಅಂಗವಿಕಲ ವ್ಯಕ್ತಿಗಳಿಗೆ:**<br>ದೃಷ್ಟಿ ಮಾಂದ್ಯವುಳ್ಳವರಿಗೆ | - | - | - | - | - | - | - | 1 | 01 |
| ಒಟ್ಟು | 05 | 01 | 02 | 03 | 01 | 01 | 01 | 13 | 27 |

ಮೇಲ್ಕಾಣಿಸಿದ ವರ್ಗೀಕರಣವನ್ನು ನಿಗಮದ ವಿಭಾಗವಾರು ಸ್ಥಳೀಯ (LOCAL CADRE) ಸ್ಥಳಿಯೇತರ (RESIDUAL CADRE) ವೃಂದಗಳನ್ನು ನಿಗದಿಪಡಿಸಿದ ನಂತರ ರೋಸ್ಟರ್ ಆಧರಿಸಿ ಮಾಡಲಾಗಿದೆ.

**<u>ಸೂಚನೆ :</u> ಆಯಾ ವರ್ಗದ ಸಮತಳ ಮೀಸಲಾತಿಯ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ್ದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿಮಾಡಲಾಗುವುದು.**

1. **<u>ವಿದ್ಯಾರ್ಹತೆ / ದೇಹದಾರ್ಡ್ಯತೆ :</u>**

ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : **30-09-2014** ರೊಳಗಾಗಿ ಈ ಕೆಳಗೆ ನಮೂದಿಸಿರುವ ನಿಗಧಿತ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಬೇಕು.

**i. <u>ಸಹಾಯಕ ಲೆಕ್ಕಿಗ / ASSISTANT ACCOUNTANT</u>** :

**ಅ)** ಕಾನೂನು ಬದ್ದವಾಗಿ ಸ್ಥಾಪಿತಗೊಂಡ ವಿಶ್ವ ವಿದ್ಯಾಲಯವೊಂದರಿಂದ ೩ ವರ್ಷ ಅವಧಿಯ ವಾಣಿಜ್ಯ ಪದವಿಯಲ್ಲಿ ಪಾಸಾಗಿರಬೇಕು.

**a) A Bachelor Degree in Commerce three years course from a University established by Law.**

**ಬ)** ಗಣಕಯಂತ್ರದ (ಕಂಪ್ಯೂಟರ್) ಜ್ಞಾನ ಅವಶ್ಯವಾಗಿರುತ್ತದೆ.

**b)** Computer Knowledge is Essential.

**ii. <u>ಸಹಾಯಕ ಉಗ್ರಾಣ ರಕ್ಷಕ / ASSISTANT STORE KEEPER</u>:**

ಅ) ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಡಿಪ್ಲೊಮಾ ಇನ್ ಮೈಕ್ಯಾನಿಕಲ್ / ಆಟೊಮೋಬೈಲ್ ಇಂಜಿನಿಯರಿಂಗ್ ವೃತ್ತಿಯಲ್ಲಿ ೩ ವರ್ಷದ ಡಿಪ್ಲೊಮಾ ಪಾಸಾಗಿರಬೇಕು.

**a) A Pass in three years Diploma in Mechanical / Automobile Engineering from a recognized institution.**

**iii. <u>ಅಂಕಿ ಅಂಶ ಸಹಾಯಕ / STATISTICAL ASSISTANT</u>:**

ಅ) ಕಾನೂನು ಬದ್ದವಾಗಿ ಸ್ಥಾಪಿತಗೊಂಡ ವಿಶ್ವ ವಿದ್ಯಾಲಯವೊಂದರಿಂದ ೩ ವರ್ಷ ಅವಧಿಯ ಸಂಖ್ಯಾಶಾಸ್ತ್ರ / ಬಿ.ಸಿ.ಎ. / ಬಿ.ಎಸ್.ಸಿ. ಕಂಪ್ಯೂಟರ್ ಸೈನ್ಸ್ ಪದವಿಯಲ್ಲಿ ಪಾಸಾಗಿರಬೇಕು.

**a) A Bachelor degree in statistics or BCA. or BSC Computer Science three years course**

ಬ) ನಾಲೆಜ್ ಇನ್ ಕಂಪ್ಯೂಟರ್ ಅಪ್ಲಿಕೇಶನ್ ಇಸ್ ಎಸೆನ್‌ಶಲ್.

**a)** Knowledge in Computer Application is Essential.

**iv.<u>ಕಿರಿಯ ಸಹಾಯಕ-ಕಂ-ಡಾಟಾ ಎಂಟ್ರಿ ಆಪರೇಟರ್ / JUNIOR ASSISTANT-CUM-DATA ENTRY OPERATOR</u>.**

ಅ) ಕಲಾ / ವಾಣಿಜ್ಯ / ವಿಜ್ಞಾನ ದಲ್ಲಿ ಪಿ.ಯು.ಸಿ. ಪಾಸಾಗಿರಬೇಕು.

a) Pass in PUC in Arts or Commerce or Science.

ಬ) ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಆರು ತಿಂಗಳ ಅವಧಿಯ ಕಂಪ್ಯೂಟರ್ ಬೇಸಿಕ್ಸ್, ವಿಂಡೋಸ್, ಎಮ್.ಎಸ್.ಆಫೀಸ್, ಕಮ್ಯೂನಿಕೇಷನ್ & ಇಂಟರ್‌ನೆಟ್ & ಡಾಟಾ ಎಂಟ್ರಿ ಆಪರೇಷನ್ ವಿಥ್ ನಾಲೇಜ್ ಆಫ್ ಕನ್ನಡ ನುಡಿ ಸಾಫ್ಟ್‌ವೇರ್ ಕೋರ್ಸ್ ಹೊಂದಿರಬೇಕು.

**b)** Six (6) Month's Certificate Course in Computer basics, windows, MS Office, Communication and Internet and Data entry operation with the Knowledge of Kannada Nudi Software from the Institutaion recognized by the Government

**v. <u>ಸಹಾಯಕ ಸಂಚಾರ ನಿರೀಕ್ಷಕ / ASSISTANT TRAFFIC INSPECTOR</u>**

ಅ) **ಪ್ರಥಮ ಶ್ರೇಣಿಯಲ್ಲಿ ಪಿ.ಯು.ಸಿ. ಪಾಸಾಗಿರಬೇಕು.**

a) A Pass in pre-University examination in First Class.

ಬ) **<u>ದೇಹಧಾರ್ಡ್ಯತೆ; ಈ ಕೆಳಕಂಡ ದೇಹಧಾರ್ಡ್ಯತೆ ಹೊಂದಿರಬೇಕು.</u>**

b) Physical standards as below.

| **<u>ದೇಹಧಾರ್ಡ್ಯತೆ</u>** | | |
|---|---|---|
| | ಪುರುಷ | ಮಹಿಳೆ |
| ಎತ್ತರ | 163 ಸೆ.ಮೀ. | 153 ಸೆ.ಮೀ. |
| ತೂಕ | 55 ಕಿ.ಗ್ರಾಂ | 50 ಕಿ.ಗ್ರಾಂ. |

**ಸೂಚನೆ:– ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಹಿಂಬಾಕಿ ಹುದ್ದೆಗಳನ್ನು: ಕರ್ನಾಟಕ ಸರ್ಕಾರದ ಅಧಿಸೂಚನೆ ಕ್ರಮಾಂಕ ಡಿಪಿಆರ್/13/ಎಸ್‌ಬಿಸಿ/2001 ದಿನಾಂಕ:21–11–2001 ರನ್ವಯ ಅರ್ಜಿ ಸಲ್ಲಿಸಿರುವ ಒಟ್ಟು ಅಭ್ಯರ್ಥಿಗಳ ಪೈಕಿ 29 ವರ್ಷ ಪೂರ್ಣಗೊಂಡಿರುವ ಆದರೆ 40 ವರ್ಷ ವಯೋಮಿತಿ ಮೀರಿರದ ಅಭ್ಯರ್ಥಿಗಳನ್ನು ಅವರು ನಿಗದಿತ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳ ಆಧಾರದ ಮೇಲೆ ಮಾತ್ರ ಆಯ್ಕೆ ಮಾಡಲಾಗುವುದು. ಈ ಮೇಲ್ಕಂಡ ವಯೋಮಿತಿಯಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, 29 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.**

**vi. ಭದ್ರತಾ ರಕ್ಷಕ / SECURITY GUARD**

ಅ) ಪಿ.ಯು.ಸಿ. ಪಾಸಾಗಿರಬೇಕು ಅಥವಾ ಎರಡನೇ ದರ್ಜೆಯ ಸೈನಿಕ ಪ್ರಮಾಣ ಪತ್ರ ಹೊಂದಿದ ಮಾಜಿ ಸೈನಿಕ ಅಥವಾ ತತ್ಸಮಾನ ದರ್ಜೆಯ ನೆವಿ / ಎರ್ ಫೋರ್ಸ್ ಪ್ರಮಾಣ ಪತ್ರ ಹೊಂದಿದ ಮಾಜಿ ಸೈನಿಕ.

a) Must have passed PUC or must be an Ex-service personnel with Second class Army Certificate or equivalent grade in Navy/Air Force.

ಬ) **ದೇಹಧಾರ್ಡ್ಯತೆ**

| ದೇಹಧಾರ್ಡ್ಯತೆ | | |
|---|---|---|
| | ಪುರುಷ | ಮಹಿಳೆ |
| ಎತ್ತರ | 163 ಸೆ.ಮೀ. | 153 ಸೆ.ಮೀ. |
| ತೂಕ | 55 ಕಿ.ಗ್ರಾಂ | 50 ಕಿ.ಗ್ರಾಂ. |

ಭದ್ರತಾ ರಕ್ಷಕ ಹುದ್ದೆಗೆ ಅರ್ಜಿ ಹಾಕಿದ ಅಭ್ಯರ್ಥಿಗಳು ಮೇಲ್ಕಾಣಿಸಿದ **ದೇಹಧಾರ್ಡ್ಯತೆ** ಹೊಂದಿದಲ್ಲಿ ಮಾತ್ರ ಮುಂದಿನ ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಅರ್ಹತೆ ಹೊಂದುತ್ತಾರೆ.

ಕ) **ದೈಹಿಕ ಸಾಮರ್ಥ್ಯ ಪರೀಕ್ಷೆ :**

| ದೈಹಿಕ ಸಾಮರ್ಥ್ಯ ಪರೀಕ್ಷೆ | | | |
|---|---|---|---|
| **ಪುರುಷ** | | **ಮಹಿಳೆ** | |
| 400 ಮೀಟರ್ ಓಟ | 80 ಸೆಕೆಂಡಿನ ಒಳಗಾಗಿ | 200 ಮೀಟರ್ ಓಟ | 42 ಸೆಕೆಂಡಿನ ಒಳಗಾಗಿ |
| ಉದ್ದ ಜಿಗಿತ | 3.50 ಮೀಟರ್‌ಗಿಂತ ಕಡಿಮೆ ಇಲ್ಲದಂತೆ | ಉದ್ದ ಜಿಗಿತ | 3.00 ಮೀಟರ್‌ಗಿಂತ ಕಡಿಮೆ ಇಲ್ಲದಂತೆ |
| ಗುಂಡು ಎಸೆತ (7.26 ಕೆ.ಜಿ.) | 5.00 ಮೀಟರ್‌ಗಿಂತ ಕಡಿಮೆ ಇಲ್ಲದಂತೆ | ಗುಂಡು ಎಸೆತ (4.00 ಕೆ.ಜಿ.) | 4.5 ಮೀಟರ್‌ಗಿಂತ ಕಡಿಮೆ ಇಲ್ಲದಂತೆ |

ಭದ್ರತಾ ರಕ್ಷಕ ಹುದ್ದೆಗೆ ಅರ್ಜಿ ಹಾಕಿದ ಅಭ್ಯರ್ಥಿಗಳು ಮೇಲ್ಕಾಣಿಸಿದ ದೇಹಧಾರ್ಡ್ಯತೆ ಮತ್ತು ಎಲ್ಲಾ ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದಲ್ಲಿ ಮಾತ್ರ ಭದ್ರತಾ ರಕ್ಷಕ ಹುದ್ದೆಗೆ ದೈಹಿಕ ಸಾಮರ್ಥ್ಯ ಹೊಂದಿರುವುದಾಗಿ ಪರಿಗಣಿಸಲಾಗುವುದು.

**Vii. ಕುಶಲಕರ್ಮಿ / ARTISAN**

1. **ಕುಶಲಕರ್ಮಿ ಹುದ್ದೆಯ ಆಟೋ ಮೆಕ್ಯಾನಿಕ್, ಆಟೋ ಬಾಡಿ ಬಿಲ್ಡರ್, ಆಟೋ ವೆಲ್ಡರ್ ಮತ್ತು ಆಟೋ ಪೇಂಟರ್ ವೃತ್ತಿಗಳಿಗೆ;**

ಅ) ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ 3 ವರ್ಷದ ಡಿಪ್ಲೋಮಾ ಕೋರ್ಸ್ ಇನ್ ಮೈಕ್ಯಾನಿಕಲ್/ಆಟೋಮೊಬೈಲ್/ವೆಲ್ಡಿಂಗ್ & ಶೀಟ್ ಮೆಟಲ್ ಟೆಕ್ನಾಲಜಿಯಲ್ಲಿ ಇಂಜನಿಯರಿಂಗ್ ಪಾಸಾಗಿರಬೇಕು.

(a) Must be holder of 03 years course in Diploma from a recognized Institution in Mechanical / Automobile / Welding & Sheet metal Technology Engineering for Auto Mechanic, Auto Body Builder, Auto Welder & Auto Painter.

ಬ) ಚಾಲ್ತಿಯಲ್ಲಿರುವ ಭಾರಿ ವಾಹನ ಚಾಲನಾ ಪರವಾನಿಗೆ ಹೊಂದಿರಬೇಕು ಅಥವಾ ಪರೀಕ್ಷಾರ್ಥ ಅವಧಿ ಮುಗಿಯುವುದರೊಳಗೆ ಹೊಂದತಕ್ಕದ್ದು.

**c)** Must possess a valid current HTV License OR Obtain one before completion of the period of probation.

ಕ) **<u>ದೇಹಧಾರ್ಢ್ಯತೆ; ಈ ಕೆಳಕಂಡ ದೇಹಧಾರ್ಢ್ಯತೆ ಹೊಂದಿರಬೇಕು.</u>**

| ದೇಹಧಾರ್ಢ್ಯತೆ | | |
|---|---|---|
| | ಪುರುಷ | ಮಹಿಳೆ |
| ಎತ್ತರ | 163 ಸೆ.ಮೀ. | 153 ಸೆ.ಮೀ. |
| ತೂಕ | 55 ಕಿ.ಗ್ರಾಂ | 50 ಕಿ.ಗ್ರಾಂ. |

2. **<u>ಕುಶಲಕರ್ಮಿ ಹುದ್ದೆಯ ಆಟೋ ಎಲೆಕ್ಟ್ರೀಶನ್ ವೃತ್ತಿಗೆ;</u>**

**ಅ)** ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ 3 ವರ್ಷದ ಡಿಪ್ಲೋಮಾ ಕೋರ್ಸ್ ಇನ್ ಮೈಕ್ಯಾನಿಕಲ್ / ಆಟೋಮೊಬೈಲ್ / ವೆಲ್ಡಿಂಗ್ & ಶೀಟ್ ಮೆಟಲ್ ಟೆಕ್ನಾಲಜಿಯಲ್ಲಿ ಇಂಜನಿಯರಿಂಗ್ ಪಾಸಾಗಿರಬೇಕು.

a) Must be holder of 03 years course in Diploma from a recognized Institution in Electrical / Electrical & Electronics /Mechatronics Engineering / Refrigeration & Air Conditioning for Auto Electrician.

ಬ) ಚಾಲ್ತಿಯಲ್ಲಿರುವ ಭಾರಿ ವಾಹನ ಚಾಲನಾ ಪರವಾನಿಗೆ ಹೊಂದಿರಬೇಕು ಅಥವಾ ಪರೀಕ್ಷಾರ್ಥ ಅವಧಿ ಮುಗಿಯುವುದರೊಳಗೆ ಹೊಂದತಕ್ಕದ್ದು.

**a)** Must possess a valid current HTV License OR Obtain one before completion of the period of probation.

**ಕ)** **<u>ದೇಹಧಾರ್ಢ್ಯತೆ; ಈ ಕೆಳಕಂಡ ದೇಹಧಾರ್ಢ್ಯತೆ ಹೊಂದಿರಬೇಕು.</u>**

| ದೇಹಧಾರ್ಢ್ಯತೆ | | |
|---|---|---|
| | ಪುರುಷ | ಮಹಿಳೆ |
| ಎತ್ತರ | 163 ಸೆ.ಮೀ. | 153 ಸೆ.ಮೀ. |
| ತೂಕ | 55 ಕಿ.ಗ್ರಾಂ | 50 ಕಿ.ಗ್ರಾಂ. |

**ಸೂಚನೆ:– ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಹಿಂಬಾಕಿ ಹುದ್ದೆಗಳನ್ನು: ಕರ್ನಾಟಕ ಸರ್ಕಾರದ ಅಧಿಸೂಚನೆ ಕ್ರಮಾಂಕ ಡಿಪಿಆರ್/13/ಎಸ್‌ಬಿಸಿ/2001 ದಿನಾಂಕ:21–11–2001 ರನ್ವಯ ಅರ್ಜಿ ಸಲ್ಲಿಸಿರುವ ಒಟ್ಟು ಅಭ್ಯರ್ಥಿಗಳ ಪೈಕಿ 29 ವರ್ಷ ಪೂರ್ಣಗೊಂಡಿರುವ ಆದರೆ 40 ವರ್ಷ ವಯೋಮಿತಿ ಮೀರಿರದ ಅಭ್ಯರ್ಥಿಗಳನ್ನು ಅವರು ನಿಗದಿತ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳ ಆಧಾರದ ಮೇಲೆ ಮಾತ್ರ ಆಯ್ಕೆ ಮಾಡಲಾಗುವುದು. ಈ ಮೇಲ್ಕಂಡ ವಯೋಮಿತಿಯಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, 29 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.**

| ದೇಹಧಾರ್ಢ್ಯತೆ | | |
|---|---|---|
| | ಪುರುಷ | ಮಹಿಳೆ |
| ಎತ್ತರ | 163 ಸೆ.ಮೀ. | 153 ಸೆ.ಮೀ. |
| ತೂಕ | 55 ಕಿ.ಗ್ರಾಂ | 50 ಕಿ.ಗ್ರಾಂ. |

**viii. <u>ತಾಂತ್ರಿಕ ಸಹಾಯಕ/TECHNICAL ASSISTANT:</u>**

ಅ) ಪ್ರೌಢ ಶಿಕ್ಷಣ ಮಂಡಳಯಿಂದ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ನಂತರ ತಾಂತ್ರಿಕ ಮಂಡಳ ಅಥವಾ ಸರ್ಕಾರದಿಂದ ಅಂಗೀಕೃತವಾದ ಸಂಸ್ಥೆಯಲ್ಲಿ ಐ.ಟಿ.ಸಿ / ಐ.ಟಿ.ಐ / ಎನ್.ಎ.ಸಿ. ಯಲ್ಲಿ ಮೆಕ್ಯಾನಿಕ್ (ಮೋಟಾರ ವೆಹಿಕಲ್) / ಡೀಸೆಲ್ ಮೆಕ್ಯಾನಿಕ್ / ಆಟೋ ಎಲೆಕ್ಟ್ರೀಷಿಯನ್ / ವೆಲ್ಡರ್ / ಶೀಟ್ ಮೆಟಲ್ ವರ್ಕರ್ / ಎಲೆಕ್ಟ್ರಾನಿಕ್ ಮೆಕ್ಯಾನಿಕ್ / ಅಪೋಲ್‌ಸ್ಟ್ರಿ / ಡ್ರಾಫ್ಟ್ಸ್‌ಮ್ಯಾನ್ (ಮೆಕ್ಯಾನಿಕಲ್) / ಫಿಟ್ಟರ್ / ಮೆಷಿನಿಸ್ಟ್ / ಟೈರ್ ಫಿಟಿಂಗ್ / ವಲ್ಕನೇಸಿಂಗ್ / ಪೈಂಟಿಂಗ್ / ರೆಫ್ರಿಜರೇಷನ್ ಎಂಡ್ ಏರ್ ಕಂಡೀಷನಿಂಗ್ / ಟರ್ನರ್ / ಆಟೋಮೊಬೈಲ್ / ಎಲೆಕ್ಟ್ರಿಕಲ್ / ಎಲೆಕ್ಟ್ರಾನಿಕ್ಸ್ / ಫ್ಯಾಬ್ರಿಕೇಷನ್ (ಫಿಟಿಂಗ್ ಎಂಡ್ ವೆಲ್ಡಿಂಗ್) ವೃತ್ತಿಯಲ್ಲಿ ಉತ್ತೀರ್ಣರಾಗಿರಬೇಕು.

a) A Pass in ITC / ITI / NAC in Mechanic (Moter vehicle) / Diesel Mechanic / Auto Electricain / Welder / Sheet Metal Worker / Electronic-Mechanic / Upholstery / Draftsman (Mechanical) / Fitter / Machinist / Tyre fitting / Vulcanizing / Painting / Refrigeration & Air conditioning / Turner / Automobile / Electrical / Electronics / Fabrication (Fitting & Welding), from an institution recognized by the Technical Board or the Government after a pass in SSLC from the Secondary Board of Education.

ಬ) **<u>ದೇಹಧಾರ್ಡ್ಯತೆ; ಈ ಕೆಳಕಂಡ ದೇಹಧಾರ್ಡ್ಯತೆ ಹೊಂದಿರಬೇಕು.</u>**

| ದೇಹಧಾರ್ಡ್ಯತೆ | | |
|---|---|---|
| | ಪುರುಷ | ಮಹಿಳೆ |
| ಎತ್ತರ | 163 ಸೆ.ಮೀ. | 153 ಸೆ.ಮೀ. |
| ತೂಕ | 55 ಕಿ.ಗ್ರಾಂ | 50 ಕಿ.ಗ್ರಾಂ. |

**[ ವಿ.ಸೂಚನೆ : ಕುಶಲಕರ್ಮಿ / ಸಹಾಯಕ ಸಂಚಾರ ನಿರೀಕ್ಷಕ / ಅಂಕಿ ಅಂಶ ಸಹಾಯಕ / ಸಹಾಯಕ ಉಗ್ರಾಣ ರಕ್ಷಕ / ಸಹಾಯಕ ಲೆಕ್ಕಿಗ ಹುದ್ದೆಗಳಿಗೆ ಆಯ್ಕೆ ಹೊಂದಿದ ಅಭ್ಯರ್ಥಿಗಳು ಅವರು ನೇಮಕಾತಿ ಹೊಂದಿದ ದಿನಾಂಕದಿಂದ ಪರಿಕ್ಷಾರ್ಥ ಸೇವೆಗೆ ನಿಯೋಜಿಸುವ ಮುನ್ನ ಗಣಕಯಂತ್ರ ಜ್ಞಾನವನ್ನು ಕಡ್ಡಾಯವಾಗಿ ಪಡೆಯಬೇಕಾಗುತ್ತದೆ. ಈ ವಿಷಯದಲ್ಲಿ ಕಿಯೋನಿಕ್ಸ್ ಸಂಸ್ಥೆಯಿಂದ ಅಥವಾ ಕರ್ನಾಟಕ ಸರ್ಕಾರದಿಂದ ಅಂಗೀಕೃತವಾದ ಇತರೇ ಸಂಸ್ಥೆಗಳಿಂದ ಕನ್ನಡ ಸಾಫ್ಟವೇರ ಮೂಲಕ ಎಂ.ಎಸ್.ಆಫೀಸ್ ಮತು್ತ ಡೆಸ್ಕ್‌ಟಾಪ್ ಪಬ್ಲಿಷಿಂಗ್ ವಿಷಯದಲ್ಲಿ ಪರಿಣತಿ ಪಡೆದು ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸಬೇಕಾಗುತ್ತದೆ.]**

**2. <u>ವಯೋಮಿತಿ :</u>** ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ **: 30-09-2014 ರಂದು/ರೊಳ**ಗಾಗಿ ಈ ಈ ಕೆಳಕಾಣಿಸಿದ ವಯೋಮಿತಿ ಹೊಂದಿರಬೇಕು.

| ವರ್ಗ | ಕನಿಷ್ಠ | ಗರಿಷ್ಠ |
|---|---|---|
| ಸಾಮಾನ್ಯ ವರ್ಗ | 18 ವರ್ಷ | 35 ವರ್ಷ |
| ವರ್ಗ2ಎ/2ಬಿ/3ಎ/3ಬಿ | 18 ವರ್ಷ | 38 ವರ್ಷ |
| ಪ.ಜಾ/ಪ.ಪಂ/ವರ್ಗ-1 | 18 ವರ್ಷ | 40 ವರ್ಷ |

ಅ) ಇಲಾಖಾ ಅಭ್ಯರ್ಥಿಗಳಿಗೆ ಅವರು ಸಲ್ಲಿಸಿರುವ ಸೇವಾವಧಿಯಲ್ಲಿ ಗರಿಷ್ಠ 10 ವರ್ಷಗಳಿಗೆ ಮೀರದಂತೆ ವಯೋಮಿತಿಯಲ್ಲಿ ರಿಯಾಯಿತಿಯನ್ನು ನೀಡಲಾಗುವುದು. ಆದರೆ ಅವರ ವಯಸ್ಸು 45 ವರ್ಷಗಳಿಗೆ ಮೀರಿರಬಾರದು.

ಆ) ಮಾಜಿ ಸೈನಿಕ ಅಭ್ಯರ್ಥಿಯು ಭಾರತದ ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸಿ, ಮಾಜಿ ಸೈನಿಕ ಎಂಬುದಕ್ಕೆ ಅರ್ಹ ಪ್ರಮಾಣಪತ್ರವನ್ನು (Discharge certificate) ಹೊಂದಿದ್ದರೆ, ಅವರು ಸಲ್ಲಿಸಿದ ಸೇವೆಯ ಜೊತೆಗೆ 3 ವರ್ಷಗಳ ವಯೋಮಿತಿಯ ರಿಯಾಯಿತಿಗೆ ಅರ್ಹರು, ಆದರೆ ಅವರ ವಯಸ್ಸು 45 ವರ್ಷಗಳಿಗೆ ಮೀರಿರಬಾರದು.

**3. <u>ಜಾತಿ / ವರ್ಗ ಮೀಸಲಾತಿ :</u>**

ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು, ಕೆಳಕಂಡ ನಿಗಧಿತ ನಮೂನೆಗಳಲ್ಲಿ ಚಾಲ್ತಿಯಲ್ಲಿರುವ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.

ಅ) ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ-ಡಿ,

ಆ) ವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ-ಇ,

ಇ) ವರ್ಗ-2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ನಮೂನೆ-ಎಫ್,

(ನಮೂನೆ-ಡಿ, ಇ ಮತ್ತು ಎಫ್ ಪ್ರಮಾಣಪತ್ರಗಳ ನಮೂನೆಗಳನ್ನು ನಿಗಮದ ವೆಬ್‌ಸೈಟ್‌ನಲ್ಲಿ ಬಿತ್ತರಿಸಲಾಗಿದೆ.

**<u>ಸೂಚನೆ:</u>**

¬ ಚಾಲ್ತಿಯಲ್ಲಿರುವ ಹಾಗೂ ಅರ್ಜಿ ಸಲ್ಲಿಸಲು ನಿಗಧಿಪಡಿಸಲಾಗಿರುವ ಕೊನೆಯ ದಿನಾಂಕ 30-09-2014 ರೊಳಗಾಗಿ ಪಡೆದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಹೊಂದಿದ್ದಲ್ಲಿ ಮಾತ್ರ ಆಯಾ ಗುಂಪಿನ ಮೀಸಲಾತಿ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

¬ ವಿದ್ಯಾಭ್ಯಾಸಕ್ಕಾಗಿ / ಶಿಕ್ಷಣಕ್ಕಾಗಿ / ಸರ್ಕಾರಿ ಸೌಲಭ್ಯಕ್ಕಾಗಿ ಅಥವಾ ಸಾಲಕ್ಕಾಗಿ ಎಂದು ಪಡೆದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

¬ ಪರಿವಾರ, ತಳವಾರ, ಮಾಲೇರು, ಕುರುಬ, ಬೆಸ್ತ ಮತ್ತು ಕೋಳ ಜಾತಿಗೆ ಸೇರಿದ ಅಭ್ಯರ್ಥಿಗಳು ಪರಿಶಿಷ್ಠ ಪಂಗಡದ ನಾಯಕ, ಮಾಲೇರು, ಕಾಡುಕುರುಬ, ಜೇನುಕುರುಬ, ಗೊಂಡ, ರಾಜ್‌ಗೊಂಡ, ಕೋಳದೋರ ಮತ್ತು ಟೋಕ್ರಿಕೋಳ ಎಂದು ಜಾತಿ ಪ್ರಮಾಣ ಪತ್ರ ಪಡೆದಿದ್ದಲ್ಲಿ ಅವುಗಳು ಅಸಿಂಧು ಆಗುತ್ತವೆ. ಆದುದರಿಂದ, ಪರಿಶಿಷ್ಠ ಪಂಗಡದ ನಾಯಕ, ಮಾಲೇರು, ಕಾಡುಕುರುಬ, ಜೇನುಕುರುಬ, ಗೊಂಡ, ರಾಜ್‌ಗೊಂಡ, ಕೋಳದೋರ ಮತ್ತು ಟೋಕ್ರಿಕೋಳ ಜಾತಿಗೆ ಸೇರಿದ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ / 713 / ಎಸ್‌ಎಡಿ / 93 ದಿನಾಂಕ: 11-03-2002 ರನ್ವಯ ದಿನಾಂಕ:11/03/2002ರ ನಂತರ ಹಾಗೂ ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ಕೊನೆಯ ದಿನಾಂಕದೊಳಗೆ ಪಡೆದ ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು.

¬ ಮೀಸಲಾತಿ ಬಯಸುವ ಅಭ್ಯರ್ಥಿಗಳು ಸಂಬಂದಪಟ್ಟ ಮೀಸಲಾತಿಗಳನ್ನು ನಿರ್ದಿಷ್ಟ ಪ್ರಾಧಿಕಾರಸ್ಥರಿಂದ ನಿಗದಿತ ನಮೂನೆಯಲ್ಲಿ, ಸಂಸ್ಥೆಯು ಅರ್ಜಿ ಸಲ್ಲಿಸಲು ನಿಗದಿಪಡಿಸುವ ಕೊನೆಯ ದಿನಾಂಕ:30/09/2014 ರೊಳಗಾಗಿ ಹೊಂದಿರತಕ್ಕದ್ದು. ಕೊನೆಯ ದಿನಾಂಕದ ನಂತರ ಪಡೆದಂತಹ ಮೀಸಲಾತಿ / ದಾಖಲಾತಿಗಳನ್ನು ಪರಿಗಣಿಸಲಾಗುವುದಿಲ್ಲ.

4. <u>ಗ್ರಾಮೀಣ ಮೀಸಲಾತಿ ಃ</u>

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:08:ಸೆನೆನಿ:2001, ದಿನಾಂಕ:13/02/2001 ರಂತೆ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಯಮಾವಳಿಗಳನ್ವಯ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು.

- ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಪ್ರಮಾಣ ಪತ್ರವನ್ನು ನಮೂನೆ-2 ರಲ್ಲಿ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ ಸಹಿ ಮತ್ತು ಮೊಹರು ಹೊಂದಿದ ಪ್ರಮಾಣ ಪತ್ರದ ಮೇಲೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯ ಮೇಲು ಸಹಿ ಹಾಗೂ ಮೊಹರು ಪಡೆದ ಪ್ರಮಾಣ ಪತ್ರ ಹೊಂದಿದ್ದಲ್ಲಿ ಮಾತ್ರ ಗ್ರಾಮೀಣ ಮೀಸಲಾತಿಗೆ ಅರ್ಹರಾಗುವರು.
- ಗ್ರಾಮೀಣ ಮೀಸಲಾತಿ ಕೋರ ಬಯಸುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಮೇಲೆ ತಿಳಿಸಿದಂತೆ ನಮೂನೆ-2 ನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಹಾಗೂ ಮೊಹರಿನೊಂದಿಗೆ ಹಾಗೂ (ಕ್ರೀಮಿಲೇಯರ್) ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ-1 ರಲ್ಲಿ ಸಂಬಂಧಪಟ್ಟ ತಹಶೀಲ್ದಾರರಿಂದ ಸಹಿ ಮತ್ತು ಮೊಹಿರಿನೊಂದಿಗೆ ಪಡೆದ ಪ್ರಮಾಣ ಪತ್ರ ಹೊಂದಿರಬೇಕು.
- ಇತರೆ ನಮೂನೆಗಳಲ್ಲಿ ಸಲ್ಲಿಸಲ್ಪಡುವ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಂತಹವರು ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ.
- ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಬಿತ್ತರಿಸಲಾಗಿದೆ.

5. <u>ಕನ್ನಡ ಮಾಧ್ಯಮ ಮೀಸಲಾತಿ ಃ</u>

ಅಭ್ಯರ್ಥಿಯು 1 ನೇ ತರಗತಿಯಿಂದ 10 ನೇ ತರಗತಿಯವರೆಗಿನ ಎಲ್ಲಾ ತರಗತಿಗಳನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ**/71/**ಸೆನೆನಿ**/2001,** ದಿನಾಂಕ:24/10/2002 ರನ್ವಯ ನಿಗಧಿತ ನಮೂನೆಯಲ್ಲಿ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ ಸಹಿ ಹಾಗೂ ಮೊಹರು ಪಡೆದ ಪ್ರಮಾಣ ಪತ್ರ ಹೊಂದಿದ್ದಲ್ಲಿ ಮಾತ್ರ ಕನ್ನಡ ಮಾಧ್ಯಮ ಮೀಸಲಾತಿಗೆ ಅರ್ಹರಿರುತ್ತಾರೆ. (ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಬಿತ್ತರಿಸಲಾಗಿದೆ).

6. <u>ಮಾಜಿ ಸೈನಿಕ ಮೀಸಲಾತಿ ಃ</u>

ಮಾಜಿ ಸೈನಿಕ ಅಭ್ಯರ್ಥಿಯು ಭಾರತದ ಶಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸಿ, ಸದರಿ ಸೇವೆಯಿಂದ ಡಿಸ್‌ಚಾರ್ಜ್ ಆಗಿರುವ ಬಗ್ಗೆ ಮತ್ತು ಅವರು ಸಿವಿಲ್ ಸೇವೆಗಳಿಗೆ ಅರ್ಹರಿರುವ ಬಗ್ಗೆ ಅಧಿಕೃತ ಡಿಸ್‌ಚಾರ್ಜ್ ಪುಸ್ತಕವನ್ನು ಅಥವಾ ಮಾಜಿ ಸೈನಿಕ ಎಂಬುದಕ್ಕೆ ಅರ್ಹ ಪ್ರಮಾಣಪತ್ರವನ್ನು ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ವಿತರಿಸಲ್ಪಟ್ಟಿರುವ ಅಧಿಕೃತ ದಾಖಲೆಗಳನ್ನು ಹೊಂದಿರಬೇಕು.

7. <u>ಯೋಜನಾ ನಿರಾಶ್ರಿತರು ಃ</u>

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ/23/ಸೆನೆನಿ/99, ದಿನಾಂಕ:23/11/2000 ರಲ್ಲಿ ಸೂಚಿಸಿರುವಂತೆ ಯೋಜನಾ ನಿರಾಶ್ರಿತರ ಮೀಸಲಾತಿಗೆ ಅರ್ಹ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಅಧಿಕೃತ ಪ್ರಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರದಲ್ಲಿ ಯಾವುದಾದರೂ ಒಂದು ಐಟಂ ಸಂಪೂರ್ಣವಾಗಿ ಅನ್ವಯಿಸಿದಲ್ಲಿ ಮತ್ತು ಸದರಿ ನಮೂನೆಯನ್ನು ಸಮರ್ಪಕವಾಗಿ ಹಾಗೂ ಸಂಪೂರ್ಣವಾಗಿ ಭರ್ತಿ ಮಾಡಿದ ಪಕ್ಷದಲ್ಲಿ ಮಾತ್ರ ಯೋಜನಾ ನಿರಾಶ್ರಿತರ ಮೀಸಲಾತಿಗೆ ಅರ್ಹರಿರುತ್ತಾರೆ. ಆದರೆ ಸದರಿ ಸರ್ಕಾರದ ಆದೇಶದನುಸಾರ ಈ ನಿಯಮ ಜಾರಿಗೆ ಬಂದ ದಿನಾಂಕದಿಂದ ಹಿಂದಕ್ಕೆ 20 ವರ್ಷಗಳ ಪೂರ್ವದಲ್ಲಿ ಅಥವಾ 20 ವರ್ಷಗಳ ಹಿಂದೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಂತಹ ಪ್ರಕರಣಗಳ ಅಭ್ಯರ್ಥಿಗಳು ಈ ಮೀಸಲಾತಿ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ (ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಬಿತ್ತರಿಸಲಾಗಿದೆ).

8. <u>ಅಂಗವಿಕಲತೆಯ ಮೀಸಲಾತಿ ಃ</u>

ಅಂಗವಿಕಲತೆಯ ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸರ್ಕಾರದ ಆದೇಶ ಸಂಃ ಸಿಆಉಇ/115/ಸೇನೇಸೇ/2005 ದಿನಾಂಕಃ 19-05-2005 ರಲ್ಲಿ ನಿರ್ಧಿಷ್ಟಪಡಿಸಿದ ಅಂಗ ವೈಕಲ್ಯತೆಯಲ್ಲಿ ಕನಿಷ್ಟ ಶೇ. 40 ಮತ್ತು ಅದಕ್ಕಿಂತ ಹೆಚ್ಚಿನ ಅಂಗ ವೈಕಲ್ಯತೆ ಹೊಂದಿರುವ ಕುರಿತು ಅಧಿಕೃತ ಪ್ರಾಧಿಕಾರಿಗಳಿಂದ ಅಂಗವಿಕಲತೆಯನ್ನು ನಿರ್ಧಿಷ್ಟಪಡಿಸಿ "ಉದ್ಯೋಗಕ್ಕಾಗಿ" ನೀಡಲಾಗುವ ಸಮರ್ಪಕ ಪ್ರಮಾಣ ಪತ್ರವನ್ನು ಹೊಂದಿರಬೇಕು.

**<u>ಈ ಜಾಹೀರಾತಿನಲ್ಲಿ ನಿಯಮಾನುಸಾರ ಮೀಸಲಿರಿಸಿದ ಅಂಗವಿಕಲ ಅಭ್ಯರ್ಥಿಗಳಲ್ಲಿ ದೃಷ್ಟಿಮಾಂದ್ಯವುಳ್ಳ ಅಂಗವಿಕಲ ಅಭ್ಯರ್ಥಿಗಳು ಮತ್ತು ಶ್ರವಣದೋಷವುಳ್ಳ ಅಂಗವಿಕಲ ಅಭ್ಯರ್ಥಿಗಳು ಲಭ್ಯವಾಗದ್ದಿದ್ದಲ್ಲಿ ಮಾತ್ರ ಬೇರೆ ಅಂಗವಿಕಲ ಅರ್ಹ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.</u>**

**9. <u>ಹೈದ್ರಾಬಾದ-ಕರ್ನಾಟಕ ಪ್ರದೇಶದ 371(ಜೆ) ಮೀಸಲಾತಿ :</u>**

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಾವಳಿಗಳನ್ವಯ ಅಭ್ಯರ್ಥಿಗಳು ಅರ್ಜಿಯನ್ನು ಹಾಕಬೇಕಾದಲ್ಲಿ ಸೂಕ್ತ ಪ್ರಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರವನ್ನು ಹೊಂದಿರಬೇಕು.

**10. <u>ನಿಗದಿತ ಅರ್ಜಿ ಶುಲ್ಕ & ಪಾವತಿ ಮಾಡುವ ವಿಧಾನ :</u>**

**<u>ಅರ್ಜಿ ಶುಲ್ಕವನ್ನು ಪಾವತಿ ಮಾಡುವ ಕುರಿತು ಈ ಕೆಳಗಿನ ನಿರ್ದೇಶನಗಳನ್ನು ತಪ್ಪದೇ ಪಾಲಿಸತಕ್ಕದ್ದು.</u>**

ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಅರ್ಜಿಯ ಪ್ರತಿಯನ್ನು ಮುದ್ರಿಸಿಕೊಂಡು, ಯಾವುದೇ ಪ್ರಧಾನ ಅಂಚೆ ಕಚೇರಿ (Head Post Office) / ಉಪ ಅಂಚೆ ಕಚೇರಿ (Sub Post Office) ಗಳಲ್ಲಿ ಮಾತ್ರ ನಿಗದಿತ ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು. ಅಂಚೆ ಕಚೇರಿಯಲ್ಲಿ ಪಾವತಿಸಿದ ಮೂಲ ಚಲನ್‌ನ ಪ್ರತಿಯನ್ನು ಸಾಮಾನ್ಯ ಸಾಮರ್ಥ್ಯ ಪರೀಕ್ಷಾ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. ಚಲನ್‌ನ ಮೂಲ ಪ್ರತಿಯನ್ನು ಹಾಜರುಪಡಿಸದಿದ್ದಲ್ಲಿ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಅವಕಾಶ ನೀಡಲಾಗುವುದಿಲ್ಲ.

| | |
|---|---|
| ಸಾಮಾನ್ಯ ವರ್ಗ/2ಎ/2ಬಿ/3ಎ/3ಬಿ | **ರೂ.400/-** (ಅಂಚೆ ಕಚೇರಿ ಶುಲ್ಕ ಹೊರತುಪಡಿಸಿ) |
| ಪ.ಜಾ./ಪ.ಪಂ./ವರ್ಗ-1/ಮಾಜಿ ಸೈನಿಕ/ ಅಶಕ್ತ ಮಾಜಿ ಸೈನಿಕರ ಅವಲಂಬಿತರಿಗೆ | **ರೂ.200/-** (ಅಂಚೆ ಕಚೇರಿ ಶುಲ್ಕ ಹೊರತುಪಡಿಸಿ) |

ಅಂಚೆ ಕಚೇರಿಗಳ ವ್ಯವಹಾರದ ವೇಳೆಯಲ್ಲಿ **<u>ದಿನಾಂಕ: 07/10/2014</u>** ರ ಒಳಗಾಗಿ ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು. ಅಂಚೆ ಕಚೇರಿಯನ್ನು ಹೊರತುಪಡಿಸಿ ಇತರೇ ಬ್ಯಾಂಕ್/ಬ್ಯಾಂಕಿನ ಶಾಖೆಗಳಲ್ಲಿ/ಚೆಕ್/ಡಿಡಿ/ ಪೋಸ್ಟಲ್ ಆರ್ಡರ್/ಇತರೆ ರೀತಿಯಲ್ಲಿ ಶುಲ್ಕ ಸಂದಾಯ ಮಾಡಿದ್ದಲ್ಲಿ ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಇದನ್ನು ಗಮನಿಸಿ ಅಭ್ಯರ್ಥಿಯು ಅರ್ಜಿ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸುವುದು.

ಒಮ್ಮೆ ಪಾವತಿಸಿದ ಶುಲ್ಕವನ್ನು ನಂತರ ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ. ಅರ್ಜಿ ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಅರ್ಜಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ <u>ದಿನಾಂಕ: 07/10/2014</u> ರ ಒಳಗಾಗಿ ಅರ್ಜಿ ಶುಲ್ಕವನ್ನು** ಪಾವತಿಸತಕ್ಕದ್ದು. **ಅಭ್ಯರ್ಥಿಗಳು ಅರ್ಜಿ ಶುಲ್ಕವನ್ನು ತುಂಬದೇ ಇದ್ದಲ್ಲಿ** ಅಥವಾ **<u>ದಿನಾಂಕ: 07/10/2014</u>** ರ ನಂತರ ಅರ್ಜಿ ಶುಲ್ಕವನ್ನು ತುಂಬಿದಲ್ಲಿ ಅಂತಹ **ಅರ್ಜಿಗಳು ತಿರಸ್ಕೃತಗೊಳ್ಳುತ್ತ**ವೆ.

**<u>ಒಬ್ಬ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸಿದಲ್ಲಿ ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿ ಶುಲ್ಕವನ್ನು ಭರಿಸಬೇಕು.</u>**

**11. <u>ಅರ್ಜಿಯನ್ನು ಸಲ್ಲಿಸುವ ವಿಧಾನ ಮತ್ತು ಕೊನೆಯ ದಿನಾಂಕ :</u>**

- ಅರ್ಜಿಯನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರವೇ ಈಕರಸಾ ಸಂಸ್ಥೆಯ ವೆಬ್‌ಸೈಟ್ www.nekrtcrct.com ಮೂಲಕವೇ ಸಲ್ಲಿಸಬೇಕು.
- ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು **ದಿನಾಂಕ: 08/09/2014** ರಿಂದ 30/09/2014ರ ಸಂಜೆ **17-30** ಗಂಟೆಯವರೆಗೆ ನಿಗಧಿಪಡಿಸಲಾಗಿದೆ.
- ಅರ್ಜಿ ಶುಲ್ಕವನ್ನು ದಿನಾಂಕ: 07/10/2014 ರ ಒಳಗಾಗಿ ಕಛೇರಿ ಸಮಯದಲ್ಲಿ ಪ್ರಧಾನ ಅಂಚೆ ಕಚೇರಿ/ಉಪ ಅಂಚೆ ಕಚೇರಿಯಲ್ಲಿ ತುಂಬತಕ್ಕದ್ದು.
- ನಿಗಧಿತ ಕೊನೆಯ ದಿನಾಂಕ ಮತ್ತು ಸಮಯದ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದು ಬಾರಿ ಮಾತ್ರ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣದಿಂದಲೂ ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.
- ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ತಕ್ಷಣ ಅರ್ಜಿಯಲ್ಲಿ ನಮೂದಿಸಿದ ವಿವರಗಳ ಆಧಾರದ ಮೇಲೆ ನೀಡುವ ನೋಂದಣಿ ಸಂಖ್ಯೆಯುಳ್ಳ ಅರ್ಜಿ ಪ್ರತಿಯನ್ನು ಮುದ್ರಿಸಿ (ಡೌನ್‌ಲೋಡ್) ಕೊಂಡು ತಮ್ಮೊಂದಿಗೆ ತಪ್ಪದೇ ಇಟ್ಟುಕೊಳ್ಳುವುದು ಹಾಗೂ ಹಣ ಪಾವತಿ ಮಾಡಿದ ಅಂಚೆ ಕಚೇರಿಯಿಂದ ಪಡೆದ ಚಲನ್‌ನ್ನು ಮೂಲದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವುದು.

12. **ಸಾಮಾನ್ಯ ಸಾಮರ್ಥ್ಯ ಪರೀಕ್ಷೆ :**

- ಅರ್ಜಿ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ.
- ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ಗುಲಬರ್ಗಾ / ಹೊಸಪೇಟೆ / ಬೆಂಗಳೂರು / ಹುಬ್ಬಳ್ಳಿ ಕೇಂದ್ರಗಳಲ್ಲಿ ನಡೆಸಲಾಗುವುದು.
- ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಮಯದಲ್ಲಿ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಅಭ್ಯರ್ಥಿಯು ಒಮ್ಮೆ ಆಯ್ಕೆ ಮಾಡಿಕೊಂಡ ಸಾಮಾನ್ಯ ಸಾಮರ್ಥ್ಯ ಪರೀಕ್ಷಾ ಕೇಂದ್ರವನ್ನು ನಂತರ ಯಾವುದೇ ಕಾರಣಕ್ಕೂ ಬದಲಾಯಿಸಲಾಗುವುದಿಲ್ಲ.
- ಕುಶಲಕರ್ಮಿ **ಆಟೋ ಮೆಕ್ಯಾನಿಕ್, ಆಟೋ ಬಾಡಿ ಬಿಲ್ಡರ್, ಆಟೋ ವೆಲ್ಡರ್ ಮತ್ತು ಆಟೋ ಪೇಂಟರ್ ಹುದ್ದೆಗೆ** ಮತ್ತು ಸಹಾಯಕ ಉಗ್ರಾಣ ರಕ್ಷಕ ಹುದ್ದೆಗೆ ವಿದ್ಯಾರ್ಹತೆಯು ಒಂದೇ ಆಗಿರುವುದರಿಂದ ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಪ್ರತಿಯೊಂದು ಹುದ್ದೆಗಳಿಗೆ ನಿಗದಿಪಡಿಸಿದ ಅರ್ಜಿ ಶುಲ್ಕವನ್ನು ಪಾವತಿಸುವುದು ಕಡ್ಡಾಯವಾಗಿರುತ್ತದೆ, ಒಂದಕ್ಕಿಂತ ಹೆಚ್ಚು ಹುದ್ದೆಗಳ ಆಯ್ಕೆಗೆ ಅರ್ಹರಾದಲ್ಲಿ ಯಾವ ಹುದ್ದೆಯ ಆಯ್ಕೆಗೆ ಇಚ್ಛಿಸುತ್ತೀರಿ ಎಂಬುವುದರ ಬಗ್ಗೆ ಅದ್ಯತೆಯನ್ನು ಕಡ್ಡಾಯವಾಗಿ ನೀಡುವುದು. ಒಮ್ಮೆ ಆದ್ಯತೆ ಕ್ರಮಾಂಕದಂತೆ ಆಯ್ಕೆಗೆ ಪರಿಗಣಿಸಿದ ನಂತರ ಯಾವುದೇ ಕಾರಣಕ್ಕೂ ಮತ್ತೊಂದು ಹುದ್ದೆ/ವೃತ್ತಿಗೆ ಪರಿಗಣಿಸುವುದಿಲ್ಲ. ಕುಶಲಕರ್ಮಿ **(ಆಟೋ ಎಲೆಕ್ಟ್ರೀಶನ್ ಹುದ್ದೆಗೆ)** ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಸದರಿ ಹುದ್ದೆಗೆ ನಿಗದಿಪಡಿಸಿದ ಅರ್ಜಿ ಶುಲ್ಕವನ್ನು ಪಾವತಿಸುವುದು ಕಡ್ಡಾಯವಾಗಿರುತ್ತದೆ.

  ಕುಶಲಕರ್ಮಿ **(ಆಟೋ ಮೆಕ್ಯಾನಿಕ್, ಆಟೋ ಬಾಡಿ ಬಿಲ್ಡರ್, ಆಟೋ ವೆಲ್ಡರ್ ಮತ್ತು ಆಟೋ ಪೇಂಟರ್),** ಸಹಾಯಕ ಉಗ್ರಾಣ ರಕ್ಷಕ ಮತ್ತು ಕುಶಲಕರ್ಮಿ **ಆಟೋ ಎಲೆಕ್ಟ್ರೀಶನ್ ಹುದ್ದೆಗಳಿಗೆ ಒಂದೇ** ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ.
- ಕಿರಿಯ ಸಹಾಯಕ-ಕಮ್-ಡಾಟಾ ಎಂಟ್ರಿ ಆಪರೇಟರ್, ಭದ್ರತಾ ರಕ್ಷಕ ಹುದ್ದೆಗೆ ಪಿಯುಸಿ ಉತ್ತೀರ್ಣರಾದ ಮತ್ತು ಸಹಾಯಕ ಸಂಚಾರ ನಿರೀಕ್ಷಕ ಹುದ್ದೆಗೆ ಪಿ ಯು ಸಿ ಪ್ರಥಮ ದರ್ಜೆಯಲ್ಲಿ ಪಾಸಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಒಂದೇ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ. ಹಾಗೂ ಒಂದಕ್ಕಿಂತ ಹೆಚ್ಚು ಹುದ್ದೆಗಳ ಆಯ್ಕೆಗೆ ಅರ್ಹರಾದಲ್ಲಿ ಯಾವ ಹುದ್ದೆಯ ಆಯ್ಕೆಗೆ ಇಚ್ಛಿಸುತ್ತೀರಿ ಎಂಬುವುದರ ಬಗ್ಗೆ ಅದ್ಯತೆಯನ್ನು ಕಡ್ಡಾಯವಾಗಿ ನೀಡುವುದು. ಒಮ್ಮೆ ಆದ್ಯತೆ ಕ್ರಮಾಂಕದಂತೆ ಆಯ್ಕೆಗೆ ಪರಿಗಣಿಸಿದ ನಂತರ ಯಾವುದೇ ಕಾರಣಕ್ಕೂ ಮತ್ತೊಂದು ಹುದ್ದೆಗೆ ಪರಿಗಣಿಸುವುದಿಲ್ಲ.
- ತಾಂತ್ರಿಕ ಸಹಾಯಕ, ಸಹಾಯಕ ಲೆಕ್ಕಿಗ, ಅಂಕಿ ಅಂಶ ಸಹಾಯಕ, ಹುದ್ದೆಗಳಿಗೆ ಪ್ರತ್ಯೇಕವಾಗಿ ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ನಡೆಸಲಾಗುವುದು. ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಬಗ್ಗೆ ವಿವರಗಳನ್ನು ನೀಡದೇ ಪರೀಕ್ಷಾ ಕೇಂದ್ರಗಳು ಬೇರೆ ಬೇರೆಯಾಗಿ ನಿಗಧಿಯಾದಲ್ಲಿ ಅದಕ್ಕೆ ಸಂಸ್ಥೆಯು ಜವಾಬ್ದಾರರಾಗುವುದಿಲ್ಲ.
- ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನೆ ಪ್ರತಿ ಹುದ್ದೆಯ ಆಯ್ಕೆಗೆ ಪರಿಗಣಿಸಲಾಗುವುದು.
- **ಅಭ್ಯರ್ಥಿಯು ಪರೀಕ್ಷೆಯನ್ನು ಕನ್ನಡ ಅಥವಾ ಆಂಗ್ಲ ಮಾಧ್ಯಮದಲ್ಲಿ ಮಾತ್ರ ಬರೆಯಲು ಅವಕಾಶವಿದ್ದು, ಪರೀಕ್ಷೆ ಬರೆಯುವ ಭಾಷಾ ಮಾಧ್ಯಮ ಹಾಗೂ ಪರೀಕ್ಷಾ ಕೇಂದ್ರವನ್ನು ಅರ್ಜಿಯಲ್ಲಿ ನಮೂದಿಸಿದ ನಂತರ ಅದೇ ಅಂತಿಮವಾಗಿದ್ದು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಲು ಅವಕಾಶ ಇರುವುದಿಲ್ಲ. ಆದ್ದರಿಂದ, ಪರೀಕ್ಷೆ ಬರೆಯುವ ಪರೀಕ್ಷಾ ಕೇಂದ್ರವನ್ನು ಸ್ಪಷ್ಟವಾಗಿ ಅರ್ಜಿಯಲ್ಲಿ ತಿಳಸುವುದು.**
- ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಹಾಜರಾಗುವ ಸಂದರ್ಭದಲ್ಲಿ ಪ್ರಧಾನ ಅಂಚೆ ಕಛೇರಿ / ಉಪ ಅಂಚೆ ಕಛೇರಿಗಳಲ್ಲಿ ಜಮಾ ಮಾಡಿರುವ ಅರ್ಜಿ ಶುಲ್ಕದ ಚಲನ್ ಪ್ರತಿಯನ್ನು ಹಾಜರುಪಡಿಸದಿದ್ದಲ್ಲಿ ಅಂತಹ ಅಭ್ಯರ್ಥಿಯನ್ನು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುವುದಿಲ್ಲ.

13. **ಆಯ್ಕೆ ವಿಧಾನ :**

- ಅಭ್ಯರ್ಥಿಗಳು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಶೇ. 75 ಅಂಕಗಳು ಮತ್ತು ನಿಗದಿತ ವಿದ್ಯಾರ್ಹತೆಯಲ್ಲಿ ಗಳಿಸಿರುವ ಅಂಕಗಳ ಶೇ. 25 ಅಂಕಗಳನ್ನು ಸೇರಿಸಿ ಅರ್ಹತೆಯ ಆಧಾರದ ಮೇಲೆ (Merit) ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನುಸಾರ 1:5 ರ ಅನುಪಾತದಲ್ಲಿ ದೈಹಿಕ ಅರ್ಹತೆ (ಅವಶ್ಯಕ ಹುದ್ದೆಗಳಿಗೆ) ಮತ್ತು ಮೂಲ ದಾಖಲೆಗಳ ಪರಿಶೀಲನೆಗೆ ಕರೆಯಲಾಗುವುದು.
- **ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯ ಮಾದರಿ ಪ್ರಶ್ನೆ ಪತ್ರಿಕೆಯನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ದಿನಾಂಕ:15/09/2014 ರ ನಂತರ ಬಿತ್ತರಿಸಲಾಗುವುದು.**

14. **ತರಬೇತಿ ಅವಧಿ, ಭತ್ಯೆ ಹಾಗೂ ವೇತನ ಶ್ರೇಣಿ :**

¬ ಆಯ್ಕೆಗೊಂಡ ಅಭ್ಯರ್ಥಿಗಳನ್ನು ಎರಡು ವರ್ಷಗಳ ಕಾಲ ಕೆಲಸದ ಮೇಲೆ ತರಬೇತಿಗೆ ನಿಯೋಜಿಸಿ ಈ ಕೆಳಕಂಡ ತರಬೇತಿ ಭತ್ಯೆಯನ್ನು ನೀಡಲಾಗುವುದು.

¬ ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷಗಳ ಕೆಲಸದ ಮೇಲೆ ತರಬೇತಿ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದವರನ್ನು ಖಾಯಂ ಪೂರ್ವ ಪರೀಕ್ಷಾರ್ಥ ಸೇವೆಯಲ್ಲಿ ನೇಮಕಗೊಳಿಸಿ ಈ ಕೆಳಕಂಡ ವೇತನ ಶ್ರೇಣಿಯಲ್ಲಿ ನಿಗಧಿಪಡಿಸಲಾಗುವುದು

| ಹುದ್ದೆ | ತರಬೇತಿ ಭತ್ಯೆ | ವೇತನ ಶ್ರೇಣಿ |
|---|---|---|
| ಕಿರಿಯ ಸಹಾಯಕ ಕಮ್ ಡಾಟಾ ಎಂಟ್ರಿ ಆಪರೇಟರ್ | 6100 | 11190-170-11530-250-12780-320-14380 -420-15220-530-16810-640-18090. |
| ಅಂಕಿ ಅಂಶ ಸಹಾಯಕ | 6500 | 13300-320-14260-420-15100-530-16690 -640-19890-730-25000. |
| ಸಹಾಯಕ ಲೆಕ್ಕಿಗ | 6500 | |
| ಸಹಾಯಕ ಉಗ್ರಾಣ ರಕ್ಷಕ | 6500 | |
| ಸಹಾಯಕ ಸಂಚಾರ ನಿರೀಕ್ಷ | 6500 | 12410-203-12910-320-14190-420-15030 -530-16620-640-19180. |
| ಭದ್ರತಾ ರಕ್ಷಕ | 6000 | 10340-140-10620-170-11300-250 -12800-320-14400. |
| ತಾಂತ್ರಿಕ ಸಹಾಯಕ | 6000 | |
| ಕುಶಲಕರ್ಮಿ | 6500 | 12410-203-12910-320-14190-420-15030 -530-16620-640-19180. |

**15. <u>ದಾಖಲಾತಿಗಳ ವಿವರ ಃ</u>**

ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವಂತೆ ಅರ್ಹತೆ ಹಾಗೂ ಮೀಸಲಾತಿಗಳಿಗೆ ಅನುಗುಣವಾಗಿ ಈ ಕೆಳಕಂಡ ಮೂಲ ದಾಖಲಾತಿಗಳ ಪ್ರಮಾಣಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಲಾಗಿರುವ ಕೊನೆಯ ದಿನಾಂಕದೊಳಗೆ ಹೊಂದಿರಬೇಕು ಹಾಗೂ ಸಂಸ್ಥೆಯು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ಹಾಜರುಪಡಿಸತಕ್ಕದ್ದು.

**<u>ಅರ್ಜಿ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳಿಗೆ (ಸಾಮಾನ್ಯವಾಗಿ).</u>**

- ಅರ್ಜಿ ಶುಲ್ಕದ ಬ್ಯಾಂಕ್ ಚಲನ್‌ನ ಮೂಲ ಪ್ರತಿ.
- ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯ ಅಂಕಪಟ್ಟಿ/ಗಳು.
- ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ / ವರ್ಗಾವಣಾ ಪ್ರಮಾಣ ಪತ್ರ / ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದೃತ ಭಾಗ.
- ಸೈನಿಕ ಸೇವೆಯಿಂದ ಬಿಡುಗಡೆಯಾದ / ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ).
- ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರುವ ಪರಿಶಿಷ್ಟ ಜಾತಿ, ಪರಿಶಿಷ್ಠ ಪಂಗಡ, ವರ್ಗ–1 2ಎ, 2ಬಿ, 3ಎ, ಹಾಗೂ 3ಬಿ ವರ್ಗಗಳ ಮೀಸಲಾತಿಯ ಚಾಲ್ತಿಯಲ್ಲಿರುವ ನಮೂನೆಯಲ್ಲಿನ ಪ್ರಮಾಣ ಪತ್ರಗಳು (ಜಾತಿ/ವರ್ಗಗಳ ಮೀಸಲಾತಿ ಕೋರಿದ್ದಲ್ಲಿ).
- ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು 2 ರಲ್ಲಿ (ಗ್ರಾಮೀಣ ಮೀಸಲಾತಿ ಕೋರಿದ್ದಲ್ಲಿ).
- ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಕನ್ನಡ ಮಾಧ್ಯಮ ಮೀಸಲಾತಿ ಕೋರಿದ್ದಲ್ಲಿ).
- ಅಂಗ ವಿಕಲ ಮೀಸಲಾತಿ ಕೋರಿರುವ ನಮೂನೆಯಲ್ಲಿ ಅಧಿಕೃತ ಪ್ರಾಧಿಕಾರಸ್ಥರಿಂದ ಪಡೆದ ಪ್ರಮಾಣ ಪತ್ರ.
- ಯೋಜನಾ ನಿರಾಶ್ರಿತ ಪ್ರಮಾಣ ಪತ್ರ (ಯೋಜನಾ ನಿರಾಶ್ರಿತ ಮೀಸಲಾತಿ ಕೋರಿದ್ದಲ್ಲಿ).
- ಇಲಾಖಾ ಅಭ್ಯರ್ಥಿಗಳು ಸಂಬಂದಪಟ್ಟ ನೇಮಕ ಪ್ರಾಧಿಕಾರಸ್ಥರಿಂದ ಪಡೆದ ಸೇವಾ ಪ್ರಮಾಣ ಪತ್ರ (ಇಲಾಖಾ ಅಭ್ಯರ್ಥಿಯಾಗಿದ್ದಲ್ಲಿ).
- ಹೈದ್ರಾಬಾದ ಕರ್ನಾಟಕ ಸ್ಥಳೀಯ ಮೀಸಲಾತಿ 371 (ಜೆ) ರಡಿ ಮೀಸಲಾತಿ ಕೋರಿದಲ್ಲಿ, ಅಂತಹ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರಸ್ಥರು ಸ್ಥಳೀಯ ವ್ಯಕ್ತಿಯೆಂದು ನೀಡುವ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗಾಗಿ ಸಲ್ಲಿಸುವುದು.

**16. <u>ಸೂಚನೆಗಳು ಃ</u>**

- ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಆನ್‌ಲೈನ್ ಮುಖಾಂತರ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಸೂಚನೆಗಳನ್ನು ತಪ್ಪದೇ ಗಮನಿಸತಕ್ಕದ್ದು.

- ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸ ಬಯಸಿದಲ್ಲಿ ಪ್ರತ್ಯೇಕ ಅರ್ಜಿ ಶುಲ್ಕವನ್ನು ಭರಿಸಿ ಅರ್ಜಿ ಸಲ್ಲಿಸಬಹುದಾಗಿದೆ
- ಒಬ್ಬ ಅಭ್ಯರ್ಥಿಯು ಒಂದು ಹುದ್ದೆಗೆ ಒಂದು ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದಲ್ಲಿ ಮೊದಲು ಸಲ್ಲಿಸಿರುವ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುವುದು ಸಂಸ್ಥೆಯ ನೇಮಕಾತಿ ನಿಯಮಾವಳಿ ಅನುಸಾರ ಅಂಗವಿಕಲರು ಸಹ ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.
- ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರನ್ನು ನೊಂದಾಯಿಸಿದ ಅರ್ಹ ಅಭ್ಯರ್ಥಿಗಳೂ ಸಹ ಈ ಜಾಹೀರಾತಿನ ಅನುಸಾರ ಅರ್ಜಿಸಲ್ಲಿಸಬಹುದಾಗಿದೆ.
- ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿದ ಅರ್ಜಿಯ ಡೌನ್‌ಲೋಡ್ ಪ್ರತಿಯನ್ನು ತಮ್ಮೊಂದಿಗೆ ತಪ್ಪದೇ ಇಟ್ಟುಕೊಳ್ಳಲು ಸೂಚಿಸಿದೆ.
- ಅಭ್ಯರ್ಥಿಗಳು ಪ್ರಧಾನ ಅಂಚೆ ಕಛೇರಿ / ಉಪ ಅಂಚೆ ಕಛೇರಿಗಳಲ್ಲಿ ಜಮಾ ಮಾಡಿರುವ ಅರ್ಜಿ ಶುಲ್ಕದ ಚಲನ್ ಪ್ರತಿಯನ್ನು ತಮ್ಮಲ್ಲಿ ಇಟ್ಟುಕೊಳ್ಳುವುದು ಹಾಗೂ ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಈ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
- ಅಭ್ಯರ್ಥಿಯು ಅರ್ಜಿಯನ್ನು ಸಮರ್ಪಕವಾಗಿ ತುಂಬದೇ ಅರ್ಜಿಯು ತಿರಸ್ಕೃತವಾದಲ್ಲಿ ಅಥವಾ ಯಾವುದೇ ಸೌಲಭ್ಯದಿಂದ ಅವರು ವಂಚಿತರಾದಲ್ಲಿ ಅದಕ್ಕೆ ಅಭ್ಯರ್ಥಿಗಳೇ ನೇರ ಜವಾಬ್ದಾರರು.
- ಅರ್ಜಿಯಲ್ಲಿ ತಪ್ಪು ಮಾಹಿತಿ ನೀಡಿ ಉದ್ಯೋಗ ಪಡೆಯುವ ಅಭ್ಯರ್ಥಿಗಳನ್ನು ಯಾವುದೇ ಸಮಯದಲ್ಲಾದರೂ ವಜಾ / ತೆಗೆದುಹಾಕಲಾಗುತ್ತದೆ. ಸುಳ್ಳು ಮಾಹಿತಿ ಅಥವಾ ನಕಲಿ ಪ್ರಮಾಣ ಪತ್ರ ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆದಿರುವುದು ಯಾವುದೇ ಸಂದರ್ಭದಲ್ಲಿ ಕಂಡುಬಂದಲ್ಲಿ ಅವರನ್ನು ಯಾವುದೇ ಮುನ್ಸೂಚನೆ ನೀಡದೇ ನೌಕರಿಯಿಂದ ವಜಾ ಮಾಡುವುದರ ಜೊತೆಗೆ ಅವರ ವಿರುದ್ಧ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು.
- ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು ಎಲ್ಲಾ ಪತ್ರ ವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿಕೊಡಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.
- ನೈತಿಕ ದುರ್ನಡತೆಯಿಂದಾಗಿ / ನೀತಿ ಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವಾ ಈ ಸಂಸ್ಥೆಯಲ್ಲಿ ಅಥವಾ ರಾಜ್ಯ / ಕೇಂದ್ರ / ಸ್ಥಳೀಯ ಸಂಸ್ಥೆ / ಕೈಗಾರಿಕಾ / ವಾಣಿಜ್ಯಕ್ಕೆ ಸಂಬಂಧಪಟ್ಟ ಅಥವಾ ರಾಜ್ಯ ಸಾರಿಗೆ ಅಧೀನದಲ್ಲಿರುವ ಕಛೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ / ನೀತಿ ಬಾಹಿರ ಚಟುವಟಿಕೆಗಳಲ್ಲಿ ಬಾಗಿಯಾಗಿ ಅಥವಾ ಆಯ್ಕೆಯಾದ ಅಭ್ಯರ್ಥಿಯು ಬದಲಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು ಬಾಹಿರ / ನೀತ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ / ವಜಾ ಮಾಡಲ್ಪಟ್ಟಿದ್ದಲ್ಲಿ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
- ಅಭ್ಯರ್ಥಿಗಳು ಪ.ಜಾತಿ / ಪ.ಪಂ. / ಇತರೆ ಗ್ರಾಮೀಣ / ಮಾಜಿ ಸೈನಿಕ/ ಕನ್ನಡ ಮಾಧ್ಯಮ (Horizontal reservation) ಇತ್ಯಾದಿಗಳ ಮೀಸಲಾತಿಗಳನ್ನು ಕೋರುತ್ತಿದ್ದಲ್ಲಿ ಕರ್ನಾಟಕ ಸರ್ಕಾರವು ನಿಗಧಿಪಡಿಸಿರುವ ಅರ್ಹತೆಯನ್ನು (ಕ್ರೈಟೀರಿಯ) ಸರಿಯಾಗಿ ತಿಳಿದುಕೊಂಡು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು.
- **ಎಸ್.ಎಸ್.ಎಲ್.ಸಿ ಅಥವಾ ಮೇಲ್ದರ್ಜೆಯ ಪರೀಕ್ಷೆಯಲ್ಲಿ ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕನ್ನಡವನ್ನು ಅಧ್ಯಯನ ಮಾಡದೆ ಇದ್ದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ಸಂಸ್ಥೆಯವತಿಯಿಂದ ನಡೆಸುವ ಕನ್ನಡ ಭಾಷಾ ಜ್ಞಾನದ ಪರೀಕ್ಷೆಯಲ್ಲಿ ಒಂದೇ ಅವಕಾಶದಲ್ಲಿ ಉತ್ತೀರ್ಣರಾಗಬೇಕು ಇಲ್ಲದಿದ್ದಲ್ಲಿ ಅವರ ಆಯ್ಕೆಯನ್ನು ರದ್ದುಗೊಳಿಸಲಾಗುವುದು**.
- ಆಯ್ಕೆಗೊಂಡು ಸೇವೆಯಲ್ಲಿ ಖಾಯಂಗೊಳ್ಳುವ ಅಭ್ಯರ್ಥಿಗಳು ಉಪಧನ ಪಾವತಿ ಕಾಯ್ದೆ 1972 ರನ್ವಯ ಉಪಧನ ಪಡೆಯಲು ಅರ್ಹರಿರುತ್ತಾರೆ. ಮುಕ್ತ ವೇತನ ಶ್ರೇಣಿಗೆ ಅರ್ಹರಾಗಿರುವುದಿಲ್ಲ.
- ಅಭ್ಯರ್ಥಿಯು ತನ್ನ ಆಯ್ಕೆಗಾಗಿ ಯಾವುದೇ ವಿಧವಾದ ಪ್ರಚಾರ ಮಾಡುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಲ್ಲಿ ಅವರನ್ನು ಯಾವ ಮುನ್ಸೂಚನೆ ನೀಡದೇ ಅವರನ್ನು ಅನರ್ಹಗೊಳಿಸಲಾಗುವುದು.
- ನೇಮಕಾತಿಯ ವಿವಿಧ ಹಂತಕ್ಕೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್ www.nekrtcrct.com ನಲ್ಲಿ ಪಡೆಯಬಹುದಾಗಿರುತ್ತದೆ. ಆದ್ದರಿಂದ, ನೇಮಕಾತಿ ಪ್ರಕ್ರಿಯೆಗಳ ಬಗ್ಗೆ ಅಭ್ಯರ್ಥಿಗಳು ಯಾವುದೇ ರೀತಿಯ ಪತ್ರ ವ್ಯವಹಾರ ಅಥವಾ ವಿಚಾರಣೆಗಳಿಗೆ ಅಸ್ಪದವಿರುವುದಿಲ್ಲ.
- ಅಭ್ಯರ್ಥಿಗಳ ಅರ್ಹತೆ ಮತ್ತು ಆಯ್ಕೆಯ ವಿಷಯದಲ್ಲಿ ಈ.ಕ.ರ.ಸಾ.ಸಂಸ್ಥೆ.,ಯ ನಿರ್ಧಾರವೇ ಅಂತಿಮವಾಗಿರುತ್ತದೆ.
- ಅಭ್ಯರ್ಥಿಯು ಸಾರ್ವಜನಿಕ ಉದ್ದಿಮೆ ಅಥವಾ ಕರ್ನಾಟಕ ಸರ್ಕಾರ ಅಥವಾ ಕೇಂದ್ರ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಲ್ಲಿ ಅಂತಹ ಅಭ್ಯರ್ಥಿಯು ಸೂಕ್ತ ಪ್ರಾಧಿಕಾರಸ್ಥರಿಂದ ಆಕ್ಷೇಪಣೆ ಇಲ್ಲವೆಂಬ ಪತ್ರವನ್ನು ಹಾಜರುಪಡಿಸತಕ್ಕದ್ದು.
- ಆಯ್ಕೆಗೊಂಡ ಸ್ಥಳೀಯ ವೃಂದಕ್ಕೆ ಸೇರಿದ ಅಭ್ಯರ್ಥಿಗಳನ್ನು ಈ.ಕ.ರ.ಸಾ. ಸಂಸ್ಥೆಯ ಯಾವುದೇ ವಿಭಾಗಕ್ಕೆ ನಿಯೋಜಿಸಲಾಗುವುದು.

17. **ವಿಶೇಷ ಸೂಚನೆಗಳು :**

- **ಅರ್ಹ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಪ್ರಾರಂಭವಾಗುವ ಬಗ್ಗೆ ಪ್ರಕಟಣೆಯನ್ನು ಪತ್ರಿಕೆಗಳಲ್ಲಿ ನೀಡಲಾಗುವುದು. ಅದರಂತೆ ಅವರು ಕರೆ ಪತ್ರಗಳನ್ನು ಸಂಸ್ಥೆಯ ವೆಬ್ ಸೈಟ್ www.nekrtcrct.com ನ ಮುಖಾಂತರ ಮುದ್ರಿಸಿಕೊಂಡು, ಸದರಿ ಕರೆಪತ್ರದಲ್ಲಿನ ಸೂಚನೆಗಳಂತೆ ಮೂಲದಾಖಲಾತಿಗಳ ಪರಿಶೀಲನೆ / ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಹಾಜರಾಗತಕ್ಕದ್ದು.**
- ಅಭ್ಯರ್ಥಿಹೊಂದಿರುವ ಮೀಸಲಾತಿಯನ್ನು ಪರಿಗಣಿಸಿ ನಿಗದಿತ ವಿದ್ಯಾರ್ಹತೆಯಲ್ಲಿ ಪಡೆದ ಶೇಕಡಾ 25 ರಷ್ಟು ಮತ್ತು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಪಡೆದ ಅಂಕಗಳಲ್ಲಿ ಶೇಕಡಾ 75 ಅಂಕಗಳನ್ನು ಸೇರಿಸಿ ಸರ್ಕಾರ ನಿಗದಿಪಡಿಸಿರುವ ಮೀಸಲಾತಿಗನುಸಾರವಾಗಿ ಆಯ್ಕೆ ಮಾಡಲಾಗುವುದು. ಆದ್ದರಿಂದ ಮಧ್ಯವರ್ತಿಗಳ ಅಥವಾ ಯಾವುದೇ ತರಹದ ಆಮಿಷಕ್ಕೆ ಒಳಗಾಗಬಾರದೆಂದು ತಿಳಿಯಪಡಿಸಲಾಗಿದೆ. ಆಯ್ಕೆಯನ್ನು ಪಾರದರ್ಶಕವಾಗಿ ಮಾಡಲಾಗುವುದು.
- ಈ.ಕ.ರ.ಸಾ. ಸಂಸ್ಥೆಯಿಂದ ಇತರೆ ಅಂಗ ಸಂಸ್ಥೆಗಳಾದ ಕ.ರಾ.ರ.ಸಾ. ನಿಗಮ / ಬೆ.ಮ.ನ.ಸಾ. ಸಂಸ್ಥೆ / ವಾ.ಕ.ರ.ಸಾ. ಸಂಸ್ಥೆಗಳಿಗೆ ವರ್ಗಾವಣೆಯಾಗಲು ಅವಕಾಶಗಳಿರುವುದಿಲ್ಲ.

**ವ್ಯವಸ್ಥಾಪಕ ನಿರ್ದೇಶಕರು**

**ಪ್ರತಿಯನ್ನು ಗೌರವ ಪೂರ್ವಕವಾಗಿ :–**

- ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ಮುಖ್ಯ ಮಂತ್ರಿಯವರ ಸಚಿವಾಲಯ, ವಿಧಾನ ಸೌಧ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸನ್ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತರಲು ಕೋರಲಾಗಿದೆ.
- ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ ಹಾಗೂ ಅಧ್ಯಕ್ಷರು, ಈ.ಕ.ರ.ಸಾ.ಸಂಸ್ಥೆ. ಗುಲಬರ್ಗಾ. ರವರ ಆಪ್ತ ಕಾರ್ಯದರ್ಶಿರವರ ಮಾಹಿತಿಗಾಗಿ ಹಾಗೂ ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲು ಕೋರಲಾಗಿದೆ.
- ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ನಿಗಮ., ಬೆಂಗಳೂರು ರವರ ಮಾಹಿತಿಗಾಗಿ,
- ವ್ಯವಸ್ಥಾಪಕ ನಿರ್ದೇಶಕರು, ಬೆ.ಮ.ನ.ಸಾ.ಸಂಸ್ಥೆ., ಬೆಂಗಳೂರು ರವರ ಮಾಹಿತಿಗಾಗಿ,
- ವ್ಯವಸ್ಥಾಪಕ ನಿರ್ದೇಶಕರು, ವಾ.ಕ..ರ.ಸಾ.ಸಂಸ್ಥೆ., ಹುಬ್ಬಳ್ಳಿ ರವರ ಮಾಹಿತಿಗಾಗಿ,

**ಪ್ರತಿಯನ್ನು :–**

- ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 4ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು ರವರ ಮಾಹಿತಿಗಾಗಿ.
- ನಿರ್ದೇಶಕರು, ವೃತ್ತಿ ಮತ್ತು ಉದ್ಯೋಗ ವಿನಿಮಯ ಕೇಂದ್ರ, ಸುಬ್ಬಯ್ಯ ರಸ್ತೆ, ಬೆಂಗಳೂರು–27 ರವರ ಮಾಹಿತಿಗಾಗಿ.
- ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಕೇಂದ್ರ, 9/1, ಶ್ರೀ ಪ್ರಶಾಂತ ಕಾಂಪ್ಲೆಕ್ಸ, ಪಿ ಕಾಳಿಂಗ್‌ರಾವ ರಸ್ತೆ, ಬೆಂಗಳೂರು ರವರ ಮಾಹಿತಿಗಾಗಿ.
- ಉಪ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ ವ್ಯವಸ್ಥೆ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.
- ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರ ರವರ ಮಾಹಿತಿಗಾಗಿ.
- ನಿರ್ದೇಶಕರು, (ಸಿ & ಪ) ನಿರ್ದೇಶಕರು, (ಭ & ಜಾ), ಕ.ರಾ.ರ.ಸಾ.ನಿಗಮ., ರವರ ಆಪ್ತಕಾರ್ಯದರ್ಶಿಗಳ ಮಾಹಿತಿಗಾಗಿ,
- ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕ.ರಾ.ರ.ಸಾ.ಸಂಸ್ಥೆ.,/ವಾ.ಕ.ರ.ಸಾ.ಸಂಸ್ಥೆ.,/ಬೆಂ.ಮ.ಸಾ.ಸಂಸ್ಥೆ., ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
- ಎಲ್ಲಾ ಇಲಾಖಾ ಮುಖ್ಯಸ್ಥರು, ಈ.ಕ.ರ.ಸಾ.ಸಂಸ್ಥೆ. ಕೇಂದ್ರ ಕಛೇರಿ, ಗುಲಬರ್ಗಾ. ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
- ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಈ.ಕ.ರ.ಸಾ.ಸಂಸ್ಥೆ. ರವರ ಮಾಹಿತಿಗಾಗಿ ಹಾಗೂ ಈ ಜಾಹೀರಾತು ಪ್ರತಿಯನ್ನು ವಿಭಾಗೀಯ ಕಛೇರಿ, ಪ್ರಾದೇಶಿಕ ಕಾರ್ಯಗಾರ ಮತ್ತು ಘಟಕಗಳ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
- ಎಲ್ಲಾ ಘಟಕ ವ್ಯವಸ್ಥಾಪಕರು, ಈ.ಕ.ರ.ಸಾ.ಸಂಸ್ಥೆ. ರವರ ಮಾಹಿತಿಗಾಗಿ ಹಾಗೂ ಪ್ರತಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿ ಕಾರ್ಮಿಕರ ಗಮನಕ್ಕೆ ತರುವುದು.
- ಜಿಲ್ಲಾ ಉದ್ಯೋಗಾಧಿಕಾರಿ / ಉದ್ಯೋಗ ಅಧಿಕಾರಿಗಳು ಗುಲಬರ್ಗಾ / ಬೀದರ / ರಾಯಚೂರು / ಬಳ್ಳಾರಿ / ಕೊಪ್ಪಳ / ಬಿಜಾಪೂರ / ರವರ ಮಾಹಿತಿಗಾಗಿ ಕಳುಹಿಸಲಾಗಿದೆ. ಜಾಹೀರಾತಿನ ಪ್ರತಿಯನ್ನು ಸೂಚನಾ ಫಲಕದ ಮೇಲೆ ಪ್ರಕಟಿಸಲು ಹಾಗೂ ತಮ್ಮಿಂದ ನೊಂದಾಯಿಸಲ್ಪಟ್ಟಿರುವ ಅರ್ಹ ಅಭ್ಯರ್ಥಿಗಳಿಗೆ ಜಾಹೀರಾತಿನಂತೆ **ಕೊನೆಯ ದಿನಾಂಕದೊಳಗೆ** ಅರ್ಜಿ ಸಲ್ಲಿಸಲು ತಮ್ಮಿಂದ ನೇರವಾಗಿ ತಿಳುವಳಿಕೆ ನೀಡಲು ಕೋರಲಾಗಿದೆ.

1) ಸಹಾಯಕ ನಿರ್ದೇಶಕರು, ಉದ್ಯೋಗ ವಿನಿಮಯ ಕೇಂದ್ರಗಳ (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ ಅಧಿನಿಯಮ ಜಾರಿ ಘಟಕ) ಸರ್ಕಾರಿ ಕೈಗಾರಿಕೆ ತರಬೇತಿ ಕೇಂದ್ರದ ಹಿಂಬಾಗ, ಎಂ.ಎಸ್.ಕೆ.ಮಿಲ್. ರಸ್ತೆ ಗುಲಬರ್ಗಾ. ರವರ ಮಾಹಿತಿಗಾಗಿ.

**ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು**